# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ಫೆಬ್ರವರಿ 1, 2025

ಸಂಪುಟ : 51 ಸಂಚಿಕೆ : 260 ☎ 08192-254736 91642 99999 RNI No: 27369 ಪುಟ : 8 ರೂ : 5.00 www.janathavani.com janathavani@mac.com





## ಜನ್ಮದಿನದ ಹಾರ್ದಿಕ ಶುಭಾಶಯಗಳು

ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ ನಮ್ಮ ನೆಚ್ಚಿನ ಸ್ನೇಹಜೀವಿಯವರಾದ ಯುವ ಕಣ್ಮಣಿ

**ಶ್ರೀ ಶ್ರೀನಿವಾಸ ದಾಸಕರಿಯಪ್ಪ**

ಅವರಿಗೆ ಜನ್ಮ ದಿನದ ಶುಭಾಶಯಗಳು.

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಆಯುಷ್ಯ, ಆರೋಗ್ಯ, ಸುಖ, ಶಾಂತಿ, ಕರುಣಿಸಲೆಂದು ಪ್ರಾರ್ಥಿಸುತ್ತೇವೆ.




# ವಿಕಸಿತ ಭಾರತಕ್ಕೆ ಶೇ.8ರ ಬೆಳವಣಿಗೆ

## ಸಂಸತ್ತಿನ ಉಭಯ ಸದನಗಳಲ್ಲಿ ಆರ್ಥಿಕ ಸಮೀಕ್ಷೆ ಮಂಡಿಸಿದ ಸಚಿವೆ ನಿರ್ಮಲಾ



ನವದೆಹಲಿ, ಜ. 31 - 2047ರ ವೇಳೆಗೆ ಭಾರತ ವಿಕಸಿತ ದೇಶವಾಗಲು ಎರಡು ದಶಕಗಳವರೆಗೆ ಶೇಕಡ 8ರ ಬೆಳವಣಿಗೆಯ ಅಗತ್ಯ ಇದೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2024- 25ರ ಸಾಲಿನ ಆರ್ಥಿಕ ಸಮೀಕ್ಷೆಯನ್ನು ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಿದ್ದಾರೆ.

ಈ ಬೆಳವಣಿಗೆಯ ಗುರಿ ತಲುಪಲು ಭೂ ಹಾಗೂ ಕಾರ್ಮಿಕ ಸೇರಿದಂತೆ ಹಲವು ವಲಯಗಳಲ್ಲಿ ಸುಧಾರಣೆಯ ಅಗತ್ಯವಿದೆ ಎಂದು ತಿಳಿಸಲಾಗಿದೆ.

ಈ ಬೆಳವಣಿಗೆಯ ಹಂತಕ್ಕೆ ತಲುಪಲು ಹೂಡಿಕೆಯ ಪ್ರಮಾಣ ಈಗಿರುವ ಜಿಡಿಪಿಯ ಶೇಕಡ 31 ರಿಂದ ಶೇಕಡ 35ಕ್ಕೆ ಹೆಚ್ಚಿಸಬೇಕಿದೆ. ಉತ್ಪಾದನಾ ವಲಯವನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕಿದೆ ಹಾಗೂ ಎ.ಐ., ರೋಬೋಟಿಕ್ಸ್ ಹಾಗೂ ಬಯೋಟೆಕ್ನಾಲಜಿ ಸೇರಿದಂತೆ ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳ ಮೇಲೆ ಹೂಡಿಕೆ ಮಾಡಬೇಕಿದೆ ಎಂದು ತಿಳಿಸಲಾಗಿದೆ.

2030- 32ರ ವರೆಗೆ ಭಾರತ ವರ್ಷಕ್ಕೆ 78.5 ಲಕ್ಷ ಹೊಸ ಕೃಷಿಯೇತರ ಉದ್ಯೋಗಗಳನ್ನು ಸೃಷ್ಟಿಸಬೇಕಿದೆ. ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಅಭಿವೃದ್ಧಿಪಡಿಸಬೇಕಿದೆ ಹಾಗೂ ಭವಿಷ್ಯಕ್ಕೆ ಅನುಗುಣವಾಗಿ ಮೂಲ ಭೂತ ಸೌಲಭ್ಯಗಳನ್ನು ವೇಗವಾಗಿ ರೂಪಿಸ ಬೇಕಿದೆ ಎಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ಯಮಗಳು ದಕ್ಷವಾಗಿ ಹಾಗೂ ಕಡಿಮೆ ವೆಚ್ಚದಲ್ಲಿ ಕಾರ್ಯನಿರ್ವಹಿಸಲು ಅಗತ್ಯವಾದ ಸುಧಾರಣಾ ಕ್ರಮಗಳನ್ನು (2ನೇ ಪುಟಕ್ಕೆ)


## ತೃತೀಯ ವರ್ಷದ ಪುಣ್ಯಸ್ಮರಣೆ

**ಲಿಂ. ಶರಣ ಕೆ.ಪಿ. ಕರೇಗೌಡ್ರು**

(ನಿವೃತ್ತ ವ್ಯವಸ್ಥಾಪಕರು, ವಿಜಯಾ ಬ್ಯಾಂಕ್)

ಲಿಂ. ದಡ್ಡಿ ನಿಂಗಪ್ಪನವರ ಪುತ್ರ, ಗೋವಿನಹಾಳು, ಹರಿಹರ ತಾಲ್ಲೂಕು.

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದರೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ



ದುಃಖತಪ್ತ ಕುಟುಂಬ ವರ್ಗ

ಧರ್ಮಪತ್ನಿ : ಶ್ರೀಮತಿ ನಿರ್ಮಲ ಕರೇಗೌಡ್ರು,
ಶ್ರೀಮತಿ ಕವಿತಾ ಶ್ರೀ ಕೆ.ಪಿ. ನಿಂಗನಗೌಡ, ಹಾಗೂ ನಿಹಾಲ್ ಕೆ.ಪಿ., ಮಾನ್ವಿ ಕೆ.ಪಿ.
ಶ್ರೀ ಕೆ.ಪಿ. ಕಿರಣ್ ಕುಮಾರ್,
ದಡ್ಡಿ ಮನೆತನದವರು, ಗೋವಿನಹಾಳು ಮತ್ತು ಪುರತಗೆರೆ ಮನೆತನದವರು,
ಹಿಂಡಸಘಟ್ಟ ಹಾಗೂ ಬಂಧು-ಮಿತ್ರರು.

ಗ್ಲಾಸ್ ಪ್ಲಾನೆಟ್ ಮತ್ತು ನಿಹಾಲ್ ಬಿಲ್ಡಿಂಗ್ ಸಿಸ್ಟಮ್
ಮೊ. 99805 44440, 78998 43590


# ಬಾಲಕಿ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ



**ಚನ್ನಗಿರಿ: ವಾಟ್ಸಾಪ್‌ನಲ್ಲಿ ಹರಿದಾಡಿದ ವಿಡಿಯೋಗಳು; ಆರೋಪಿ ಬಂಧನ**

ದಾವಣಗೆರೆ, ಜ. 31- ಬಾಲಕಿ ಮೇಲೆ ಅತ್ಯಾಚಾರ ಹಾಗೂ ಮಹಿಳೆಯರೊಂದಿಗೆ ಲೈಂಗಿಕ ಸಂಪರ್ಕ ಬೆಳೆಸಿ ಮೊಬೈಲ್‌ನಲ್ಲಿ ವೀಡಿಯೋ ಚಿತ್ರೀಕರಿಸಿ, ಸಾಮಾಜಿಕ ಜಾಲ ತಾಣದಲ್ಲಿ ಹರಿಬಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಓರ್ವನನ್ನು ಬಂಧಿಸಿದ್ದಾರೆ.

ಚನ್ನಗಿರಿ ಪಟ್ಟಣದ ದೇವರಾಜ್ ಅರಸು ಬಡಾವಣೆಯ 'ಸಿ' ಬ್ಲಾಕ್‌ನ ನಿವಾಸಿ ಅಮ್ಜದ್ ತಂದೆ ಎಸ್ .ಎಂ ಶಫೀ (56) ಬಂಧಿತ ಆರೋಪಿಯಾಗಿದ್ದು, ಈತನ ಮೇಲೆ ಪೋಕ್ಸೋ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಚನ್ನಗಿರಿ ಪಟ್ಟಣದಲ್ಲಿ ಮೆಡಿಕಲ್ ಶಾಪ್ ಇಟ್ಟುಕೊಂಡಿದ್ದ ಅಮ್ಜದ್, ಅಂಗಡಿಗೆ ಬರುವ ಹೆಣ್ಣು ಮಕ್ಕಳನ್ನು ಪುಸಲಾಯಿಸಿ ಬಲೆಗೆ ಬೀಳಿಸಿಕೊಂಡು, ಲೈಂಗಿಕ ದೌರ್ಜನ್ಯ ನೀಡಿದ್ದಲ್ಲದೇ, ವಿಡಿಯೋ ಚಿತ್ರೀಕರಿಸಿಕೊಂಡಿದ್ದ ವಿಷಯ ಬಹಿರಂಗವಾಗಿದೆ.

ಬಸ್‌ನಿಲ್ದಾಣ, ಮಾರುಕಟ್ಟೆ, ಬಸ್ ಹೀಗೆ ಎಲ್ಲಿಯೇ (2ನೇ ಪುಟಕ್ಕೆ)

# ಘನತೆಯೊಂದಿಗೆ ಸಾವನ್ನಪ್ಪುವ ಹಕ್ಕು

## ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಆರೋಗ್ಯ ಇಲಾಖೆ ಆದೇಶ

ಬೆಂಗಳೂರು, ಜ. 31 - ರೋಗಿಯು ಘನತೆ ಯೊಂದಿಗೆ ಸಾವನ್ನಪ್ಪುವ ಹಕ್ಕು ಹೊಂದಿರುವ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನದಂತೆ ಕರ್ನಾಟಕ ಆರೋಗ್ಯ ಇಲಾಖೆಯು ಆದೇಶ ಒಂದನ್ನು ಹೊರಡಿಸಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವ ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್, ಈ ಆದೇಶ ಐತಿಹಾಸಿಕ ಎಂದು ತಿಳಿಸಿದ್ದಾರೆ.

ರೋಗಿಯು ಭವಿಷ್ಯದಲ್ಲಿ ತನಗೆ ನೀಡಬೇಕಾದ ಚಿಕಿತ್ಸೆಯ ಕುರಿತು ಮುಂಚಿತವಾಗಿಯೇ ತಿಳಿಸಲು ಆದೇಶದ ಮೂಲಕ ಅವಕಾಶ (2ನೇ ಪುಟಕ್ಕೆ)


## ಹಿರೇತೊಗಲೇರಿ ಶ್ರೀಮತಿ ಗಿರಿಜಮ್ಮ ಸಣ್ಣಗೌಡ್ರು ನಿಧನ



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ವಾಸಿ
ಎಸ್.ಜಿ. ಜಯದೇವಪ್ಪ ಸಣ್ಣಗೌಡ್ರುರವರ ಧರ್ಮಪತ್ನಿ

**ಶ್ರೀಮತಿ ಗಿರಿಜಮ್ಮ ಸಣ್ಣಗೌಡ್ರು** (81)

ಇವರು ದಿನಾಂಕ 31.1.2025ರ ಶುಕ್ರವಾರ ಬೆಳಿಗ್ಗೆ 2 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಓರ್ವ ಪುತ್ರಿ, ನಾಲ್ವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅಂದೇ ದಿನಾಂಕ 31.01.2025ರ ಶುಕ್ರವಾರ ಮಧ್ಯಾಹ್ನ 3.30ಕ್ಕೆ ಹಿರೆತೊಗಲೇರಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.

**ದುಃಖತಪ್ತರು : ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಸಣ್ಣಗೌಡ್ರು ವಂಶಸ್ಥರು, ಹಿರೇತೋಗಲೇರಿ ಗ್ರಾಮಸ್ಥರು ಹಾಗೂ ಬಂಧು ಮಿತ್ರರು.**


### ಮಾತು ಮಾಣಿಕ್ಯ

ಸರಿಯಾದ ಮಾರ್ಗದಲ್ಲಿ ಸಾಗಿದರೆ ಜೀವನವು ನಿಮಗೆ ಅರ್ಹವಾದ ಎಲ್ಲವನ್ನೂ ನೀಡುತ್ತದೆ.

# ನಾಡಿದ್ದು ಚನ್ನಗಿರಿ ಬಂದ್‌ಗೆ ಕರೆ

ದಾವಣಗೆರೆ, ಜ. 31 - ಯುವತಿಯರ ಜೊತೆ ರಾಸಲೀಲೆ ನಡೆಸಿ ವಿಡಿಯೋ ಚಿತ್ರೀಕರಿಸುತ್ತಿದ್ದ ಅಮ್ಜದ್‌ಗೆ ಕಠಿಣ ಶಿಕ್ಷೆಯಾಗಲೇಬೇಕು ಎಂದು ಒತ್ತಾಯಿಸಿ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಫೆಬ್ರವರಿ 3ರಂದು ಚನ್ನಗಿರಿ ಸ್ವಯಂಪ್ರೇರಿತ ಬಂದ್ ಗೆ ಕರೆ ಕೊಡಲಾಗಿದೆ.

ವಿಶ್ವ ಹಿಂದೂ ಪರಿಷತ್, ಬಜರಂಗದಳ, ಮಹಿಳಾ, ಹಿಂದೂ ಪರ ಸಂಘಟನೆಗಳು ಹಾಗೂ ಕನ್ನಡಪರ ಸಂಘಟನೆಗಳಿಂದ ಕರೆ ನೀಡಲಾಗಿದ್ದು, ಅಂದು ಪ್ರತಿಭಟನೆ ನಡೆಸಲು ನಿರ್ಧರಿಸಿವೆ.

# ಕುಂಭಮೇಳದಲ್ಲಿ ಚಿತ್ರದುರ್ಗದ ನಾಗಸಾಧು ಸಾವು



ಚಿತ್ರದುರ್ಗ, ಜ.31- ಇತ್ತೀಚೆಗೆ ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ ಸಾವನ್ನಪ್ಪಿದ ಕರ್ನಾಟಕ ಮೂಲದವರ ಸಂಖ್ಯೆ ಏರಿಕೆಯಾಗಿದ್ದು, ಚಿತ್ರದುರ್ಗ ಮೂಲದ ನಾಗಾ ಸಾಧು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ಕಾಲ್ತುಳಿತದಿಂದ ರಾಜನಾಥ್ ಮಹಾರಾಜ್ (49) ಎನ್ನುವ ನಾಗಸಾಧು ಮೃತ ಪಟ್ಟಿದ್ದು, ಮೃತ ನಾಗಸಾಧು (2ನೇ ಪುಟಕ್ಕೆ)

# ತೆಂಡೂಲ್ಕರ್‌ಗೆ ಬಿಸಿಸಿಐ ಜೀವಮಾನ ಸಾಧನೆ ಪ್ರಶಸ್ತಿ



ಮುಂಬೈ, ಜ. 31 - ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ನೀಡುವುದಾಗಿ ಬಿಸಿಸಿಐ ಪ್ರಕಟಿಸಿದೆ. 51 ವರ್ಷದ ತೆಂಡೂಲ್ಕರ್ ಅವರು ಭಾರತದ ಪರವಾಗಿ 664 (2ನೇ ಪುಟಕ್ಕೆ)


Aaraike Hospitals


ಕಾವೇರಿ ಹಾಸ್ಪಿಟಲ್
ಇಲೆಕ್ಟ್ರಾನಿಕ್ಸ್ ಸಿಟಿ

**ಕೀಲು ಮತ್ತು ಮೂಳೆ, ಮಂಡಿ ಬದಲಾವಣೆ ರಾಜ್ಯದ ಹೆಸರಾಂತ ಹಿರಿಯ ತಜ್ಞ ವೈದ್ಯರು ಇದೀಗ ನಿಮ್ಮ ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ**

ಈಗ, ನಗರದ ಆರೈಕೆ ಹಾಸ್ಪಿಟಲ್‌ನಲ್ಲಿ ಕಾವೇರಿ ಆರ್ಥೋ ಓಪಿಡಿ

ಸಮಯ: ಸೋಮವಾರ, 3ನೇ ಫೆಬ್ರವರಿ, 2025 ಬೆಳಗ್ಗೆ 10.00

ಸ್ಥಳ: ಆರೈಕೆ ಹಾಸ್ಪಿಟಲ್ ಕೆ.ಟಿ.ಜೆ. ನಗರ ನಗರ, ನಿಟ್ಟುವಳ್ಳಿ, ದಾವಣಗೆರೆ - 577002





ನಮ್ಮ ತಜ್ಞ ವೈದ್ಯರನ್ನು ಭೇಟಿಯಾಗಿ

ಡಾ|| ಬಿ. ಸಿ. ಜಗದೀಶ್
ಹಿರಿಯ ಸಲಹಾದಾರರು, ಕೀಲು ಮತ್ತು ಮೂಳೆ, ಅಪಘಾತ ಮತ್ತು ರೋಬೋಟಿಕ್ ಮಂಡಿ ಬದಲಾವಣೆ ಶಸ್ತ್ರಚಿಕಿತ್ಸಕರು, ಸ್ಪೋರ್ಟ್ಸ್ ಮೆಡಿಸಿನ್
ಎಂಬಿಬಿಎಸ್, ಡಿ ಆರ್ಥೋ, ಎಂಎಸ್ ಆರ್ಥೋ, ಡಿಎನ್‌ಬಿ, ಎಫ್‌ಎಎಸ್‌ಎಮ್ (ಎಸ್‌ಎ)

ಲಭ್ಯವಿರುವ ಸಲಹೆ ಸೇವೆಗಳು
- ನಿರಂತರ ಸಂಧಿ ನೋವು
- ರೋಬೋಟಿಕ್ ಮಂಡಿ ಬದಲಾವಣೆ
- ನಡೆಯಲು ಮತ್ತು ಮೆಟ್ಟಿಲು ಹತ್ತಲು ಕಷ್ಟ
- ಮೂಳೆ ಮುರಿತ ಮತ್ತು ಉಳುಕು
- ಬೆನ್ನು ಅಥವಾ ಕುತ್ತಿಗೆ ನೋವು
- ಕ್ರೀಡಾ ಗಾಯಗಳಿಗೆ ಸೂಕ್ತ ಸಲಹೆ ಮತ್ತು ಚಿಕಿತ್ಸೆ

ಭೇಟಿಗಾಗಿ ಕರೆ ಮಾಡಿ: +91 84315 41487 +91 89040 09574

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ: 080 6801 6801 ಅಥವಾ ಭೇಟಿ ನೀಡಿ: www.kauveryhospitalbangalore.com



## ಜನ್ಮದಿನದ ಶುಭಾಶಯಗಳು



ಯುವ ಉದ್ಯಮಿಗಳಾದ ನಮ್ಮೆಲ್ಲರ ಪ್ರೀತಿಯ ಸ್ನೇಹಿತರು, ವಿನಾಯಕ ರೈಸ್ ಮಿಲ್ ಮಾಲೀಕರಾದ

**ಶ್ರೀ ವಿ. ಸಿದ್ದೇಶ್**

ಅವರಿಗೆ 37ನೇ ವರ್ಷದ ಹುಟ್ಟು ಹಬ್ಬದ ಹೃದಯಪೂರ್ವಕ ಶುಭಾಶಯಗಳು.

ಶುಭ ಕೋರುವವರು

- ಡಿ.ಯು. ಅರುಣ್ ಕುಮಾರ್ ಮಿಠಾಯಿ, ಡಿ.ಸಿದ್ದಪ್ಪ ಅಂಡ್ ಸನ್ಸ್, ಖ್ಯಾತ ಉದ್ಯಮಿಗಳು ಹಾಗೂ ಶ್ರೀ ಸಿದ್ದೇಶ್ವರ ಪ್ಯಾಲೇಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರು ಹರಿಹರ.
- ಜಿ.ಎಸ್. ಬಸವನಗೌಡರು, ನಿರ್ದೇಶಕರು, ಹರಿಹರ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್ ನಿ.
- ಇದಾಯತ್, ಮೆಹಬೂಬ್ ಜನರಲ್ ಸ್ಟೋರ್, ಹರಿಹರ
- ಕುಮಾರಸ್ವಾಮಿ, ಹಿರೇತೊಗಲೇರಿ
- ಮಂಜುನಾಥ್ ಕರೇಶಿವಪ್ಪ, ದಾವಣಗೆರೆ
- ಮಂಜುನಾಥ್, ಆದಿತ್ಯ ಅಲ್ಯೂಮಿನಿಯಂ, ದಾವಣಗೆರೆ
- ಸುರೇಶಣ್ಣ, ವೈ.ಎನ್. ಕ್ಯಾಂಪ್, ದಾವಣಗೆರೆ
- ಜಯಪ್ರಕಾಶ್ ಮಾಗಿ, ದಾವಣಗೆರೆ
- ಗೋಪಿಕೃಷ್ಣ, ನಂದಿತಾವರೆ



**ಅರುಣ್ ಕುಮಾರ್ ಮಿಠಾಯಿ**
ಡಿ. ಸಿದ್ದಪ್ಪ ಅಂಡ ಸನ್ಸ್, ಶ್ರೀ ಸಿದ್ದೇಶ್ವರ ಪ್ಯಾಲೇಸ್, ಮಾಲೀಕರು ಹರಿಹರ



# ಕಟ್ಟಿಗೆಹಳ್ಳಿ ಗ್ರಾಮಕ್ಕೆ ಕೆಎಸ್‌ಆರ್‌ಟಿಸಿ ಬಸ್‌ಗೆ ಆಗ್ರಹಿಸಿ ಪ್ರತಿಭಟನೆ

ಜಗಳೂರು, ಜ. 31- ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮಕ್ಕೆ ಕೆಎಸ್‌ಆರ್‌ಟಿಸಿ ಬಸ್ ಬಿಡುವಂತೆ ಆಗ್ರಹಿಸಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪೋಷಕರು ಪಟ್ಟಣದ ಪ್ರವಾಸಿ ಮಂದಿರದಿಂದ ತಾಲ್ಲೂಕು ಕಚೇರಿಯವರೆಗೆ ಮೆರವಣಿಗೆ ನಡೆಸಿ ಗುರುವಾರ ಬೃಹತ್ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಸೈಯದ್ ಕಲೀಂಉಲ್ಲಾರಿಗೆ ಮನವಿ ಸಲ್ಲಿಸಿದರು.

ಡಿಎಸ್‌ಎಸ್ ತಾಲ್ಲೂಕು ಸಂಚಾಲಕ ಮಲೆ ಮಾಚಿಕೆರೆ ಸತೀಶ್ ಮಾತನಾಡಿ, ಸ್ವಾತಂತ್ರ್ಯ ಬಂದು 78 ವರ್ಷಗಳಾದರೂ ಕುಗ್ರಾಮವಾದ ಕಟ್ಟಿಗೆಹಳ್ಳಿಗೆ ಇದುವರೆಗೂ ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯ ಕಲ್ಪಿಸಿಲ್ಲ. ವಿದ್ಯಾರ್ಥಿಗಳು ದಿನಕ್ಕೆ ಎಂಟು ಕಿ.ಮೀ ನಡೆದೇ ಶಾಲೆಗೆ ಹೋಗಬೇಕು.

ಜಗಳೂರು ಪಟ್ಟಣಕ್ಕೆ ಬರುವ ಕಾಲೇಜು ವಿದ್ಯಾರ್ಥಿಗಳಿಗೂ ಬಸ್ ವ್ಯವಸ್ಥೆ ಕಲ್ಪಿಸದೇ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಇಲ್ಲ ಸಲ್ಲದ ಸಬೂಬು ಹೇಳುತ್ತಾರೆ ಎಂದು ಆಕ್ರೋಶ ಹೊರ ಹಾಕಿದರು.

ಕರ್ನಾಟಕ ನವ ನಿರ್ಮಾಣ ವೇದಿಕೆಯ ಮಹಾಲಿಂಗಪ್ಪ ಮಾತನಾಡಿ, ಕೆಎಸ್‌ಆರ್‌ಟಿಸಿ ಬಸ್ ಬಿಡುವಂತೆ ಆಗ್ರಹಿಸಿ ಕಳೆದ 15 ದಿನಗಳಿಂದ ಅಧಿಕಾರಿಗಳನ್ನು ಒತ್ತಾಯಿಸುತ್ತಿರುವ ಗ್ರಾಮಸ್ಥರಿಗೆ ಸ್ಪಂದಿಸುತ್ತಿಲ್ಲ. ಡಿಪೋ ಬೇಡಿಕೆಗಾಗಿ ಮತ್ತು ಗ್ರಾಮೀಣ ಬಸ್ ಸೌಲಭ್ಯಕ್ಕಾಗಿ ದಾವಣಗೆರೆವರೆಗೂ ಪಾದಯಾತ್ರೆ ಮಾಡಿದ್ದೇವೆ. ಆದರೂ ಯಾವೊಬ್ಬ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್, ಆರ್.ಓಬಳೇಶ್, ಯು.ಸಿ.ರವಿ, ಆದಮ್, ಮಂಜುನಾಥ್ ಗುರೂಜಿ, ಗ್ರಾಕೂಸ್ ಅಧ್ಯಕ್ಷೆ ಸುಧಾ ಪಲ್ಲಾಗಟ್ಟೆ, ಬಿ.ಎಂ. ಅನಂತರಾಜ್, ಸತ್ಯಮೂರ್ತಿ, ಗ್ರಾಪಂ ಸದಸ್ಯರಾದ ಭಾರತಿ ಮಂಜುನಾಥ್, ಶರಣಯ್ಯ, ಸಿದ್ದಲಿಂಗಯ್ಯ, ಭೋವಿ ತಿಪ್ಪೇಸ್ವಾಮಿ ಸೇರಿದಂತೆ, ನೂರಕ್ಕೂ ಹೆಚ್ಚು ಗ್ರಾಮಸ್ಥರು ಭಾಗವಹಿಸಿದ್ದರು.

### ಅಧಿಕಾರಗಳ ಭರವಸೆ

ತಹಶೀಲ್ದಾರ್ ತಕ್ಷಣ ಸಾರಿಗೆ ಅಧಿಕಾರಿಗೆ ಕರೆ ಮಾಡಿ ಕಟ್ಟಿಗೆಹಳ್ಳಿ ಗ್ರಾಮಕ್ಕೆ ಬಸ್ ಅಗತ್ಯವಾಗಿ ಓಡಿಸಲೇ ಬೇಕು. ಸಮಸ್ಯೆ ಗಂಭೀರವಾಗಿದೆ ಎಂದು ಸೂಚಿಸಿದರು. ಡಿಟಿಓ ಫಕೃದ್ದಿನ್ ಸಾಬ್ ಫೆ.7 ರಂದು ಗ್ರಾಮಕ್ಕೆ ಬಸ್ ಬಿಡುವ ವ್ಯವಸ್ಥೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

# ವಿಕಸಿತ ಭಾರತಕ್ಕೆ ಶೇ.8ರ ಬೆಳವಣಿಗೆ

**(1ನೇ ಪುಟದಿಂದ)** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದುಕೊಂಡಾಗ ಮಾತ್ರ ವೇಗದ ಆರ್ಥಿಕ ಬೆಳವಣಿಗೆ ಸಾಧ್ಯ. ಸುಧಾರಣೆ ಹಾಗೂ ಆರ್ಥಿಕ ನೀತಿಗಳನ್ನು ವ್ಯವಸ್ಥಿತ ಉದಾರೀಕರಣದ ಮೂಲಕ ಜಾರಿಗೆ ತರಬೇಕಿದೆ ಎಂದು 2024 - 25ರ ಆರ್ಥಿಕ ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ಯಮಗಳ ಮೇಲೆ ಕನಿಷ್ಠ ನಿಯಂತ್ರಣ ಗಳು ಇರಬೇಕಿದೆ. ಈ ಉದ್ಯಮಗಳಿಗೆ ಅಗತ್ಯವಾದ ನಿರ್ವಹಣೆ ಮತ್ತು ಸಂಪನ್ಮೂಲಗಳು ಲಭ್ಯವಿರಬೇಕಿದೆ ಎಂದು ಸಮೀಕ್ಷೆ ಹೇಳಿದೆ.

ಭೂಮಿ, ಕಾರ್ಮಿಕ, ಕಟ್ಟಡ, ಸಾರ್ವಜನಿಕ ಸೇವೆ ಹಾಗೂ ಸವಲ ತ್ತುಗಳ ವಲಯಗಳಲ್ಲಿ ವ್ಯವಸ್ಥಿತ ಸುಧಾರಣೆಗಳ ಅಗತ್ಯವಿದೆ ಎಂದು ಸಮೀಕ್ಷೆ ತಿಳಿಸಿದೆ.

ಉದ್ಯಮಗಳನ್ನು ನಡೆಸಲು ಇರುವ ತೊಡಕುಗಳನ್ನು ರಾಜ್ಯಗಳು ಗುರುತಿಸ ಬೇಕಿದೆ. ಉದ್ಯಮಗಳನ್ನು ನಡೆಸುವುದನ್ನು ಸರಳಗೊಳಿಸಲು ಕ್ರಮ ತೆಗೆದುಕೊಳ್ಳಬೇಕಿದೆ ಎಂದು ಸಮೀಕ್ಷೆ ಹೇಳಿದೆ.



ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ನವದೆಹಲಿಯಲ್ಲಿ ಕೇಂದ್ರ ಬಜೆಟ್‌ಗೆ ಅಂತಿಮ ಸ್ಪರ್ಶ ನೀಡಿದ ನಂತರ ಸಚಿವ ಪಂಕಜ್ ಚೌಧರಿ ಮತ್ತು ಪೂರ್ಣ ಬಜೆಟ್ 2025-26 ತಂಡದೊಂದಿಗೆ ಫೋಟೋಗೆ ಪೋಸ್ ನೀಡಿದರು.

## ಆರ್ಥಿಕ ಸಮೀಕ್ಷೆಯ ಪ್ರಮುಖ ಅಂಶಗಳು

**2025ರ ಆರ್ಥಿಕ ವರ್ಷದಲ್ಲಿ ಶೇ. 6.4 ಹಾಗೂ 2026 ರ ವರ್ಷದಲ್ಲಿ ಶೇ. 6.3-6.8ರ ಬೆಳವಣಿಗೆ. ವಿತ್ತೀಯ ಸ್ಥಿರತೆ ಹಾಗೂ ಸ್ಥಿರ ಬಳಕೆಯಿಂದಾಗಿ ದೇಶದ ಆರ್ಥಿಕ ಮೂಲಭೂತ ಸೌಲಭ್ಯಗಳು ಬಲಿಷ್ಠವಾಗಿವೆ.**

**ಜಾಗತಿಕ ಸವಾಲುಗಳನ್ನು ಎದುರಿಸಲು ಸೂಕ್ತ ನೀತಿಗಳನ್ನು ಹೊಂದಬೇಕಿದೆ ಹಾಗೂ ದೇಶಿಯ ಮೂಲಭೂತ ಸೌಲಭ್ಯಗಳನ್ನು ಬಲಪಡಿಸಬೇಕಿದೆ.**

**ಜಾಗತಿಕ ರಾಜಕಾರಣ ಹಾಗೂ ಆರ್ಥಿಕ ಅನಿಶ್ಚಿತತೆ ಕಾರಣದಿಂದಾಗಿ ಹಣದುಬ್ಬ ರದ ಅಪಾಯ ಮುಂದುವರೆದಿದೆ. ಹೆಚ್ಚಿನ ಸಾರ್ವಜನಿಕ ಹೂಡಿಕೆ ಹಾಗೂ ಉದ್ಯಮಗಳ ಬೆಳವಣಿಗೆಯಿಂದ ಹೂಡಿಕೆ ಚಟುವಟಿಕೆ ಹೆಚ್ಚಾಗುವ ನಿರೀಕ್ಷೆ.**

**ಬೇರು ಮಟ್ಟದಲ್ಲಿ ಸುಧಾರಣೆ ತರುವ ಮೂಲಕ ಭಾರತ ತನ್ನ ಜಾಗತಿಕ ಸ್ಪರ್ಧಾತ್ಮಕತೆ ಸುಧಾರಿಸಬೇಕಿದೆ. ಈಗಿರುವ 640.3 ಶತಕೋಟಿ ಡಾಲರ್ ವಿದೇಶಿ ವಿನಿಮಯ 10.9 ತಿಂಗಳ ಆಮದು ಹಾಗೂ ಶೇಕಡ 90ರಷ್ಟು ವಿದೇಶಿ ಸಾಲ ನಿರ್ವಹಿಸಲು ಸಾಕಷ್ಟಾಗಿದೆ.**

**ಉದ್ಯಮ ವಲಯ ಎದುರಿಸುತ್ತಿರುವ ತೊಡಕುಗಳನ್ನು ನಿವಾರಿಸಲು ರಾಜ್ಯಗಳು ಉದ್ಯಮ ನಡೆಸುವುದನ್ನು ಸರಳಗೊಳಿಸುವ ಎರಡನೇ ಹಂತದ ಸುಧಾರಣೆ ಜಾರಿಗೆ ತರಬೇಕಿದೆ.**

**ಜಾಗತಿಕ ಮಾನದಂಡಗಳನ್ನು ಅಳವಡಿಸಿಕೊಳ್ಳುವ ಮೂಲಕ ಹೂಡಿಕೆ ಆಕರ್ಷಿಸಿ ರಫ್ತಿಗೆ ಉತ್ತೇಜನ ನೀಡಬೇಕಿದೆ.**

**ಉನ್ನತ ಹಂತದ ಬೆಳವಣಿಗೆ ಕಾಣಲು ಮುಂದಿನ ಎರಡು ದಶಕಗಳವರೆಗೆ ಮೂಲಭೂತ ಸೌಲಭ್ಯದಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಬೇಕಿದೆ.**

**ಜನರ ಆದಾಯ ಹೆಚ್ಚಿಸಲು ಗುಜರಾತ್, ಉತ್ತರಾಖಂಡ ಹಾಗೂ ಹಿಮಾಚಲ ಪ್ರದೇಶಗಳು ಮಾತ್ರ ಕೈಗಾರಿಕಾ ವಲಯಗಳನ್ನು ಅವಲಂಬಿಸಿವೆ.**

**ಆಟೋಮೇಷನ್ ಹಾಗೂ ಎ.ಐ. ಕಾರಣಗಳಿಂದಾಗಿ ಸೇವಾ ವಲಯದ ಮೇಲೆ ಪರಿಣಾಮವಾಗುವ ಸಾಧ್ಯತೆ.**

**ಕಾರ್ಪೊರೇಟ್ ವಲಯ ಹೆಚ್ಚಿನ ಮಟ್ಟದ ಸಾಮಾಜಿಕ ಹೊಣೆಗಾರಿಕೆ ತೋರಿಸಬೇಕಿದೆ.**

**ಪರಿಸರ ಬದಲಾವಣೆ ನಿರೋಧಕವಾದ ಆಹಾರ ಧಾನ್ಯ, ಖಾದ್ಯ ತೈಲ ಬೀಜ, ಟೊಮ್ಯಾಟೊ ಹಾಗೂ ಈರುಳ್ಳಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಬೇಕಿದೆ.**

**ಭಾರತ ಅಭಿವೃದ್ಧಿ ಹೊಂದಿದ ದೇಶವಾಗಲು ಎರಡು ದಶಕಗಳ ಕಾಲ ಶೇಕಡ 8ರ ಸರಾಸರಿಯ ಬೆಳವಣಿಗೆ ಕಾಣಬೇಕಿದೆ.**

**ಹೂಡಿಕೆಯ ಪ್ರಮಾಣವನ್ನು ಈಗಿರುವ ಜಿಡಿಪಿಯ ಶೇಕಡ 31 ರಿಂದ 35ಕ್ಕೆ ಹೆಚ್ಚಿಸಬೇಕಿದೆ.**

**ಎಐ, ರೋಬೋಟಿಕ್ಸ್ ಹಾಗೂ ಬಯೋಟೆಕ್ನಾಲಜಿ ರೀತಿಯ ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳ ಮೇಲೆ ಹೂಡಿಕೆ ಮಾಡಬೇಕಿದೆ.**

# ಇಂದು ರಂಭಾಪುರಿ ಜಗದ್ಗುರುಗಳ 34ನೇ ವರ್ಧಂತಿ ಮಹೋತ್ಸವ



ರಂಭಾಪುರಿ ಪೀಠದ ವೀರ ಸಿಂಹಾಸನಾಧೀಶ್ವರ 1008 ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ 34ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವ - ಜನ ಜಾಗೃತಿ ಧರ್ಮ ಸಮಾರಂಭವು ಹಗರಿಬೊಮ್ಮನಹಳ್ಳಿ ತಾಲ್ಲೂಕು ಹಂಪಸಾಗರದಲ್ಲಿ ಇಂದು ಬೆಳಿಗ್ಗೆ 11.30 ಗಂಟೆಗೆ ಜರುಗಲಿದೆ.

ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಡೆಯುವ ಸಮಾರಂಭದ ಅಧ್ಯಕ್ಷತೆಯನ್ನು ಅಮ್ಮಿನಬಾವಿ ಪಂಚಗೃಹ ಹಿರೇಮಠದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ವಹಿಸುವರು. ಮರಿಯಮ್ಮನಹಳ್ಳಿ ಮಲ್ಲಿಕಾರ್ಜುನ ಶಿವಾಚಾರ್ಯರು, ನೆಗಳೂರು ಗುರುಶಾಂತ ಶಿವಾಚಾರ್ಯರು, ಅಮ್ಮಿನಬಾವಿ ಅಭಿನವ ಶಾಂತಲಿಂಗ ಶಿವಾಚಾರ್ಯರು, ಹರಪನಹಳ್ಳಿ ವರಸದ್ಯೋಜಾತ ಶಿವಾಚಾರ್ಯರು, ನಂದಿಪುರದ ಡಾ. ಮಹೇಶ್ವರ ಸ್ವಾಮಿಗಳು ನೇತೃತ್ವ ವಹಿಸುವರು.

**ಅಡ್ಡಪಲ್ಲಕ್ಕಿ :** ಪೀಠಾರೋಹಣ ವರ್ಧಂತಿ ಮಹೋತ್ಸವದ ನಿಮಿತ್ಯ ಬೆಳಿಗ್ಗೆ 10 ಗಂಟೆಗೆ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗುವುದು. ಸಮಾರಂಭದ ಅಂಗವಾಗಿ ಕೃಷಿ ಮೇಳ ಇಂದು ನಡೆಯಲಿದೆ.

# ಅಧಿಕಾರ ವಹಿಸಿಕೊಂಡ ರಾಣೇಬೆನ್ನೂರು ನಗರಸಭೆ ನೂತನ ಅಧ್ಯಕ್ಷ-ಉಪಾಧ್ಯಕ್ಷರು



ರಾಣೇಬೆನ್ನೂರು,ಜ.31- ಸ್ಥಳಿಯ ನಗರಸಭೆ ಅಧ್ಯಕ್ಷ- ಉಪಾಧ್ಯಕ್ಷರಾಗಿ ಆಯ್ಕೆಯಾದ ಚಂಪಕಾ ಬಿಸಲಹಳ್ಳಿ ಹಾಗೂ ನಾಗರಾಜ ಪವಾರ ಅವರುಗಳು ಇಂದು ಅಧಿಕಾರ ವಹಿಸಿಕೊಂಡರು. ಈ ಸಂದರ್ಭದಲ್ಲಿ ಹಾಜರಿದ್ದ ಶಾಸಕ ಪ್ರಕಾಶ ಕೋಳಿವಾಡ, ಶ್ರೀಮತಿ ಪೂರ್ಣಿಮಾ ಕೋಳಿವಾಡ, ನಗರಸಭಾ ಸದಸ್ಯರು ಹಾಗೂ ಮುಖಂಡರು ಶುಭ ಕೋರಿದರು.

# ಕೆನಡಾ, ಮೆಕ್ಸಿಕೋ ಮೇಲೆ 'ಟ್ರಂಪ್' ತೆರಿಗೆ

ವಾಷಿಂಗ್ಟನ್, ಜ. 31 - ಕೆನಡಾ ಹಾಗೂ ಮೆಕ್ಸಿಕೋಗಳಿಂದ ಆಮದಾಗುವ ಸರಕುಗಳ ಮೇಲೆ ಶೇಕಡ 25 ರಷ್ಟು ತೆರಿಗೆ ಶನಿವಾರದಿಂದ ಹೇರಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಚೀನಾ ಮೇಲೆ ಇದೇ ರೀತಿಯ ತೆರಿಗೆ ಹೇರುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

## 20ನೇ ವರ್ಷದ ಸವಿನೆನಪು



**ಹುಲಿಕಟ್ಟೆ ಕೆ.ಹೆಚ್. ರುದ್ರಪ್ಪನವರು**
**(ಲ್ಯಾಂಡ್ ಡೆವಲಪರ್)**
**ನೀವು ನಮ್ಮನ್ನಗಲಿ ಇಂದಿಗೆ ಇಪ್ಪತ್ತು ವರ್ಷಗಳು ಕಳೆದರೂ,**
**ಸದಾ ನಿಮ್ಮ ಸವಿನೆನಪಿನಲ್ಲಿರುವ,**
ಪ್ರೀತಿಯ ತಾಯಿ-ತಂದೆ : **ದಿ.ಗಿರಿಜಮ್ಮ ಲೇ|| ಹುಲಿಕಟ್ಟೆ ಕೆ. ಹಾಲಪ್ಪ,** ಪತ್ನಿ : **ಗಂಗಮ್ಮ**
ಅಣ್ಣ-ತಮ್ಮಂದಿರು : **ಶ್ರೀಮತಿ ಗೌರಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಚನ್ನಬಸಪ್ಪ**
**ಶ್ರೀಮತಿ ಭಾಗ್ಯಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಮಲ್ಲಿಕಾರ್ಜುನ್**
**ಶ್ರೀಮತಿ ಶೈಲಜಾ, ಹುಲಿಕಟ್ಟೆ ಕೆ.ಹೆಚ್. ಹಾಲೇಶ್**
ಮಕ್ಕಳು : **ಶ್ರೀಮತಿ ಶೃತಿ, ಶ್ರೀ ಹುಲಿಕಟ್ಟೆ ರಾಜೇಶ್**
**ಶ್ರೀಮತಿ ಪೂಜಾ, ಶ್ರೀ ಹುಲಿಕಟ್ಟೆ ಕಾರ್ತಿಕ್,**
**ಶ್ರೀಮತಿ ನಿಧಿ ಶ್ರೀ ಶಶಿಕುಮಾರ್ ಹುಲಿಕಟ್ಟೆ,**
**ಶ್ರೀಮತಿ ಅನಿತಾ, ಶ್ರೀಮಂತ್, ಯದುಕುಮಾರ್,**
**ಅಮಿತ್, ಚಂದನ್,** ಮೊಮ್ಮಕ್ಕಳು : **ರಿತಿಕಾ, ಗುಣವ್, ಪ್ರಹನ್, ಹಾರ್ದ್ವಿಕ್,**
**ಸುದೈವ್ ಹಾಗೂ ಹುಲಿಕಟ್ಟೆ ವಂಶಸ್ಥರು, ಬಂಧು-ಮಿತ್ರರು.**

# ಹರಿಹರ ನಗರಸಭೆ ಸಮಸ್ಯೆ ಚರ್ಚೆಗೆ ಶೀಘ್ರವೇ ಸಭೆ : ಜಿಲ್ಲಾಧಿಕಾರಿ ಭರವಸೆ

ಹರಿಹರ, ಜ.31- ಶೀಘ್ರದಲ್ಲಿಯೇ ಮಹತ್ವದ ಸಭೆಯನ್ನು ಏರ್ಪಡಿಸಿ ಆ ಮೂಲಕ ಹರಿಹರ ಜನತೆಯ ಸಮಸ್ಯೆಗಳಿಗೆ ಪರಿಹಾರ ನೀಡುವುದಾಗಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಭರವಸೆ ನೀಡಿದರು.



ನೂತನವಾಗಿ ನಿರ್ಮಾಣವಾಗುತ್ತಿರುವ ನಗರಸಭೆಯ ಕಟ್ಟಡ ಕಾಮಗಾರಿಯನ್ನು ವೀಕ್ಷಿಸಿ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಂತ ಸೇವಾಲಾಲ್ ಜಯಂತಿ ಮತ್ತು ವಾಲ್ಮೀಕಿ ಜಾತ್ರೆಯ ನಂತರದಲ್ಲಿ ಸಭೆ ಕರೆಯುವುದಾಗಿ ತಿಳಿಸಿದರು.

ಸಾರ್ವಜನಿಕರ ಸಮಸ್ಯೆಗಳ ವಿಚಾರಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಯ ಅಧಿಕಾರಿಗಳ ಮೇಲೆ ಆರೋಪ - ಪ್ರತ್ಯಾರೋಪ ಮಾಡುತ್ತಾ ಹೋದಷ್ಟು ಸಮಸ್ಯೆಗಳಿಗೆ ಪರಿಹಾರ ಸಿಗುವುದರ ಬದಲಿಗೆ, ಮನಸ್ತಾಪಗಳಿಗೆ ಎಡೆ ಮಾಡಿಕೊಡುತ್ತವೆ. ಆದ್ದರಿಂದ ಪರಿಹಾರ ಸಿಗುವ ನಿಟ್ಟಿನಲ್ಲಿ ಯೋಚನೆ ಮಾಡಬೇಕಾಗುತ್ತದೆ ಎಂದು ಹೇಳಿದರು.

ನಗರಸಭೆಗೆ ಹಿಂದಿನ ಅನುದಾನ ಪುನಃ ಬಂದಿರುವ 8 ಕೋಟಿ ರೂಪಾಯಿ ಹಣವನ್ನು ಸದ್ಬಳಕೆ ಮಾಡುವುದಕ್ಕೆ, ಗುತ್ತಿಗೆದಾರರು ಹಳೆಯ ಟೆಂಡರ್ ನಿಬಂಧನೆಗಳ ಪ್ರಕ್ರಿಯೆ ಪ್ರಕಾರ ಕಾಮಗಾರಿ ಮಾಡಲಿಕ್ಕೆ ಮುಂದೆ ಬಂದರೆ, ತಕ್ಷಣವೇ ಅವರಿಗೆ ಕಾಮಗಾರಿ ಆದೇಶ ನೀಡಲಾಗುತ್ತದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಮಾತನಾಡಿ, ಈ ಕೂಡಲೇ ನಗರಸಭೆ ಅಧಿಕಾರಿಗಳ ಸಭೆಯನ್ನು ಏರ್ಪಡಿಸಿ, ಜನರ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಮುಂದಾದರೆ, ಇಲ್ಲಿನ ಜನತೆಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ ಎಂದು ಹೇಳಿದರು.

ನಗರಸಭೆ ಹಿರಿಯ ಸದಸ್ಯ ಎ. ವಾಮನಮೂರ್ತಿ ಮಾತನಾಡಿ, ಮುಂಬರುವ ದಿನಗಳಲ್ಲಿ ಹರಿಹರೇಶ್ವರ ಸ್ವಾಮಿ ರಥೋತ್ಸವ ಮತ್ತು ಊರಮ್ಮ ದೇವಿ ಹಬ್ಬ ಇರುವುದರಿಂದ ಜನತೆಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳದಂತೆ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಬಸವಂತಪ್ಪ, ಮಾರುತಿ ಬೇಡರ್ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಯೋಜನಾ ಅಧಿಕಾರಿ ಮಹಾಂತೇಶ್, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ತಹಶೀಲ್ದಾರ್ ಗುರುಬಸವರಾಜ್, ನಗರಸಭೆ ಎಇಇ ವಿನಯ್ ಕುಮಾರ್, ನಗರಸಭೆ ಮ್ಯಾನೇಜರ್ ನಿರಂಜನಿ, ಇಂಜಿನಿಯರ್ ಪ್ರಕಾಶ್ ಇತರರು ಹಾಜರಿದ್ದರು.

## ಸಾವನ್ನಪ್ಪುವ ಹಕ್ಕು

**(1ನೇ ಪುಟದಿಂದ)** ಕಲ್ಪಿಸಲಾಗಿದೆ. ದೀರ್ಘಕಾಲದಿಂದ ಅನಾರೋಗ್ಯ ಪೀಡಿತರಾಗಿ ಚೇತರಿಸಿಕೊಳ್ಳುವ ಯಾವುದೇ ಆಶಾ ಭಾವನೆ ಇಲ್ಲದವರು ಇಲ್ಲವೇ ಜೀವ ರಕ್ಷಕ ಔಷಧಿಗಳಿಂದ ಯಾವುದೇ ಪ್ರಯೋಜನ ಆಗದೇ ಇರುವವರು ಸರ್ಕಾರದ ಆದೇಶದಿಂದ ಅನುಕೂಲ ಪಡೆಯಲಿದ್ದಾರೆ.

## ತೆಂಡೂಲ್ಕರ್‌ಗೆ ಪ್ರಶಸ್ತಿ

**(1ನೇ ಪುಟದಿಂದ)**ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಟೆಸ್ಟ್ ಹಾಗೂ ಏಕದಿನ ಪಂದ್ಯಗಳಲ್ಲಿ ಅತಿ ಹೆಚ್ಚು ರನ್ ಗಳಿಸಿದ ಸಾಧನೆ ಮಾಡಿದ್ದಾರೆ. 200 ಟೆಸ್ಟ್‌ಗಳಲ್ಲಿ ಅವರು 15,921 ಹಾಗೂ 463 ಏಕದಿನ ಪಂದ್ಯಗಳಲ್ಲಿ 18,426 ರನ್ ಗಳಿಸಿದ್ದಾರೆ.

# ಬಾಲಕಿ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ

**(1ನೇ ಪುಟದಿಂದ)** ಹೆಣ್ಣು ಮಕ್ಕಳು ಕಂಡರೂ ಅವರ ವಿಡಿಯೋ ಗುಪ್ತವಾಗಿ ಚಿತ್ರಿಸಿಕೊಳ್ಳುವ ಹವ್ಯಾಸ ಇಟ್ಟುಕೊಂಡಿದ್ದ ಈತ, ಮೆಡಿಕಲ್ ಶಾಪ್‌ಗೆ ಬರುವ ಹೆಣ್ಣು ಮಕ್ಕಳ ಮುಖವನ್ನು ತನ್ನ ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿಕೊಂಡಿದ್ದಾನೆ.ಹೆಣ್ಣುಮಕ್ಕಳು ಸ್ನಾನ ಮಾಡುತ್ತಿರುವುದು, ಬಸ್‌ಗಳಲ್ಲಿ ಪ್ರಯಾಣಿಸುತ್ತಿರುವುದು ಮಾತ್ರವಲ್ಲದೇ ರಸ್ತೆಗಳಲ್ಲಿ ಓಡಾಡುತ್ತಿರುವ ವೀಡಿಯೋಗಳೂ ವಾಟ್ಸಾಪ್‌ನಲ್ಲಿ ಹರಿದಾಡಿವೆ.

ಘಟನೆ ಬಗ್ಗೆ ಗೊತ್ತಾಗುತ್ತಿದ್ದಂತೆಯೇ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ವಿಡಿಯೊಗಳ ಖಚಿತತೆಯ ಬಗ್ಗೆ ಪರಿಶೀಲನೆಯೂ ಪ್ರಗತಿಯಲ್ಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ಹೆಸರು, ವಯಸ್ಸು, ಧರ್ಮ, ವಿಳಾಸ ಗುರುತಿಸುವ ಅಂಶಗಳನ್ನು ಒಳಗೊಂಡಂತೆ ಸಂತ್ರಸ್ತರ ಅಥವಾ ನೊಂದವರ ಗುರುತಿನ ಬಗ್ಗೆ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸುವುದು ಶಿಕ್ಷಾರ್ಹ ಅಪರಾಧವಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಅಶ್ಲೀಲ ಸಂದೇಶ ಮತ್ತು ಸಂಭಾಷಣೆಗಳನ್ನು ಹಂಚಿಕೊಳ್ಳುವುದು ಶಿಕ್ಷಾರ್ಹವಾಗಿವೆ. ಯಾವುದೇ ಕಾರಣಕ್ಕೂ ಇಂತಹ ವಿಡಿಯೋಗಳನ್ನು ಯಾರೊಂದಿಗೂ ಹಂಚಿಕೊಳ್ಳಬಾರದು ಎಂದು ಅವರು ಎಚ್ಚರಿಸಿದ್ದಾರೆ.



# ವಿದ್ವಾಂಸರನ್ನು ಒಗ್ಗೂಡಿಸಿದ ಹೆಗ್ಗಳಿಕೆ ಸಾಹಿತ್ಯ ಪರಿಷತ್ತಿಗೆ ಸಲ್ಲುತ್ತದೆ

### ಹರಪನಹಳ್ಳಿ ಕಸಾಪ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಜಿ. ನಂಜನಗೌಡ್ರು

ಹರಪನಹಳ್ಳಿ,ಜ.31- ನಾಡಿನ ವಿವಿಧೆಡೆಯಲ್ಲಿ ಹಂಚಿಹೋಗಿದ್ದ ವಿದ್ವಾಂಸರನ್ನು ಕನ್ನಡದ ಕಾರಣಕ್ಕೆ ಒಂದುಗೂಡಿಸಿದ ಹೆಗ್ಗಳಿಕೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಲ್ಲುತ್ತದೆ ಎಂದು ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಅಧ್ಯಕ್ಷರಾದ ಜಿ.ನಂಜನಗೌಡ್ರು ಹೇಳಿದರು.

ಪಟ್ಟಣದ ತರಳಬಾಳು ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಬೆಣ್ಣಿಹಳ್ಳಿ ಚಪ್ಪರದಹಳ್ಳಿ ಶ್ರೀಮತಿ ಬಸಮ್ಮ ಕೆಂಚಪ್ಪ, ಹೊಸಮನಿ ಬಾಗಳಿ ಚಿದಾನಂದ ಹಾಗೂ ಪತ್ನಿ ಶಿವಗಂಗಮ್ಮ, ಬಾಗಳಿ ರಾಮನಗೌಡ ಹಾಲಮ್ಮ ಚೆನ್ನನ ಗೌಡ ಮತ್ತು ಶ್ರೀಮತಿ ಎನ್. ಸುಮಂಗಲಮ್ಮ ಶಿವರುದ್ರಪ್ಪ ಇವರುಗಳ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ರೀತಿ ಒಂದು ಐತಿಹಾಸಿಕ ಮಹತ್ವದ ಘಟನೆಯಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಕಲೆ, ಜಾನಪದ, ಸಂಸ್ಕೃತಿಗಳ ಸಂವರ್ಧನೆ ಹಾಗೂ ಸಂರಕ್ಷಣೆಯ ಮಹದಾಶಯದೊಂದಿಗೆ ಹುಟ್ಟಿಕೊಂಡಿದೆ. ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಏಕೀಕರಣದ ಹೋರಾಟಗಾರರೂ, ಸಾಹಿತಿಗಳೂ, ವಿದ್ವಾಂಸರೂ ಮೈಸೂರಿನ ಆಡಳಿತಗಾರರೂ, ಅಧ್ಯಾಪಕರೂ, ಸಾರ್ವಜನಿಕ ಗಣ್ಯರು ಹೀಗೆ ಹಲವಾರು ಗಣ್ಯ ವ್ಯಕ್ತಿಗಳ ನಾಡು – ನುಡಿ ಸೇವಕರ ಒಂದು ಗುಂಪಿನ ಜನರ ಸಂಯುಕ್ತ ಶ್ರಮ ತ್ಯಾಗಗಳ ಫಲವಾಗಿ ರೂಪುಗೊಂಡಿತು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಸಮ್ಮೇಳನಗಳ ಮೂಲಕ ನಾಡಿನ ಜನರಲ್ಲಿ ಭಾವೈಕ್ಯವನ್ನುಂಟು ಮಾಡುವಲ್ಲಿ ಯಶಸ್ವಿಯಾಗಿ ಕಾರ್ಯೋನ್ಮುಖವಾಗುತ್ತಿದೆ ಎಂದರು.

ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಕನ್ನಡ ಶಿಕ್ಷಕ ಟಿ.ಎಂ.ಬಸವರಾಜ ಹಾಸ್ಯ ಸಾಹಿತ್ಯ ಹಾಗೂ ಹಡಪದ ಅಪ್ಪಣ್ಣ ಮತ್ತು ಲಿಂಗಮ್ಮನವರ ವಚನ ಕುರಿತು ಮಾತನಾಡಿ, ಹನ್ನೆರಡನೇ ಶತಮಾನದಲ್ಲಿಯೇ ಸಮಾಜದಲ್ಲಿ ಸರ್ವ ಜನಾಂಗಗಳ ಅಭಿವೃದ್ಧಿಗೆ ಶ್ರಮಿಸಿ ಆದರ್ಶ ಸಮಾಜ ನಿರ್ಮಾಣ ಮಾಡುವತ್ತ ದಿಟ್ಟ ಹೆಜ್ಜೆ ಇಟ್ಟು ಸಮಾಜ ಸುಧಾರಣೆ, ಧರ್ಮ ಜಾಗೃತಿ ಕಾರ್ಯದಲ್ಲಿ ತೊಡಗಿಕೊಂಡ ಶಿವಶರಣ ಹಡಪದ ಅಪ್ಪಣ್ಣನವರು ಒಬ್ಬ ಮಹಾನ್ ಮಾನವತವಾದಿಯಾಗಿದ್ದಾರೆ ಎಂದರು.

ದತ್ತಿದಾನಿ ಸಿದ್ದಪ್ಪ, ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಕಾರ್ಯದರ್ಶಿ ಕುಸುಮ ಜಗದೀಶ್, ಎಚ್.ಪಿ.ಎಸ್ ಪದವಿ ಕಾಲೇಜು ಪ್ರಾಂಶುಪಾಲ ಡಾ.ಮುತ್ತೇಶ್, ಎಚ್.ಪಿ.ಎಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ.ಮಂಜುನಾಥ ಬೆನಕನಕೊಂಡ ಮಾತನಾಡಿದರು.

ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಮುಖ್ಯ ಶಿಕ್ಷಕ ಎಸ್.ನಂಜಪ್ಪ, ತಾಲ್ಲೂಕು ಘಟಕದ ಗೌರವ ಕಾರ್ಯದರ್ಶಿ ಜಿ.ಮಹಾದೇವಪ್ಪ, ಶಿಕ್ಷಕರಾದ ಕೆ.ಎಂ.ಕುಮಾರಸ್ವಾಮಿ, ಎಲ್ ರಾಜಪ್ಪ, ಜೆ.ಮಧು, ಮಹಾದೇವಿ ಸೇರಿದಂತೆ ಇತರರು ಇದ್ದರು

# ವಾಯುಪಡೆ : ಇಂದಿನಿಂದ ನೇಮಕಾತಿ ರ್‍ಯಾಲಿ

ದಾವಣಗೆರೆ, ಜ.31- ಭಾರತೀಯ ವಾಯುಪಡೆಯಲ್ಲಿನ ಏರ್‌ಮ್ಯಾನ್ ಗ್ರೂಪ್ ವೈ ತಾಂತ್ರಿಕವಲ್ಲದ ಹಾಗೂ ವೈದ್ಯಕೀಯ ಸಹಾಯಕ ವೃತ್ತಿಗೆ ನೇಮಕಾತಿ ರ್‍ಯಾಲಿಯನ್ನು ಕೇರಳದ ಕೊಚ್ಚಿಯ ಎರ್ನಾಕುಲಂನಲ್ಲಿನ ಶೆಣೈಸ್, ಪಿಟಿ ಉಷಾ ರಸ್ತೆಯಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಫೆಬ್ರವರಿ 6 ರವರೆಗೆ ಏರ್ಪಡಿಸಲಾಗಿದೆ. ಮಾಹಿತಿಗಾಗಿ ವೆಬ್‌ಸೈಟ್ www.airmenselection.cda.in ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ದಾವಣಗೆರೆ ದೂ.ಸಂ: 08192-259446 ಸಂಪರ್ಕಿಸಲು ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ.

## ಅಜ್ಜೋಳ ಪ್ರಕಾಶ ನಿಧನ



ಹರಿಹರ ತಾಲ್ಲೂಕು ಕುಣೆಬೆಳಕೆರೆ ವಾಸಿ ದಿ. ಅಜ್ಜೋಳ ಅಜ್ಜಪ್ಪ ಅವರ ಮಗ ಅಜ್ಜೋಳ ಪ್ರಕಾಶ (47) ಇವರು ದಿನಾಂಕ : 31.01.2025ರ ಶುಕ್ರವಾರ ರಾತ್ರಿ 10.15ಕ್ಕೆ ನಿಧನರಾದರು. ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 01.02.2025 ಶನಿವಾರ ಮಧ್ಯಾಹ್ನ 1 ಗಂಟೆಗೆ ಕುಣೆ ಬೆಳಕೆರೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

# ಪಂಚ ದೇವಸ್ಥಾನಗಳ ಕ್ಷೇತ್ರದ ವಾರ್ಷಿಕೋತ್ಸವ ಇಂದು

ಪಿ.ಬಿ. ರಸ್ತೆ ಕರೂರು ಕ್ರಾಸ್ ಬಳಿ ಇರುವ ಪಂಚದೇವಸ್ಥಾನಗಳ ಮಹಾ ಕ್ಷೇತ್ರದಲ್ಲಿ ವಾರ್ಷಿಕೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 9 ಕ್ಕೆ ಶ್ರೀ ಲಕ್ಷ್ಮಿ ನರಸಿಂಹ ಹೋಮ, ಶ್ರೀ ಶನೈಶ್ಚರ ಸಹಿತ ನವಗ್ರಹ ಹೋಮ, ಲಲಿತ ಸಹಸ್ರನಾಮ ಪಠಣ, ನಂತರ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ.

# ಆಲೂರಿನಲ್ಲಿ ಅಪರಿಚಿತ ಶವ ಪತ್ತೆ

ದಾವಣಗೆರೆ, ಜ.31- ತಾಲ್ಲೂಕಿನ ಆಲೂರು ಗ್ರಾಮದ ಎಂಜಿಆರ್ ಕ್ರಷರ್ ಹತ್ತಿರ ಗಂಡಸಿನ ಶವ ಪತ್ತೆಯಾಗಿದ್ದು, ವಾರಸುದಾರರ ಪತ್ತೆಗೆ ಗ್ರಾಮಾಂತರ ಪೊಲೀಸರು ಮನವಿ ಮಾಡಿದ್ದಾರೆ.

ಸುಮಾರು 40 ರಿಂದ 45 ವರ್ಷ ವಯಸ್ಸಿನ ವ್ಯಕ್ತಿಯ ಶವ ಪತ್ತೆಯಾಗಿದ್ದು, ಕಾಡು ಪ್ರಾಣಿಗಳು ಈ ವ್ಯಕ್ತಿಯನ್ನು ಕಿತ್ತು ತಿಂದಿರಬಹುದೆಂಬ ಶಂಕೆಯಿದ್ದು, ಮುಖ ಕೊಳೆತು ಗುರುತು ಸಿಗದಂತಾಗಿದೆ. ಸಂಬಂಧಪಟ್ಟವರು ಗ್ರಾಮಾಂತರ ಪೊಲೀಸ್ ಠಾಣೆ (08192-262555, 94808 03256) ಯನ್ನು ಸಂಪರ್ಕಿಸಬಹುದು.

# ಕುಂಭಮೇಳದಲ್ಲಿ ಚಿತ್ರದುರ್ಗದ ನಾಗಸಾಧು ಸಾವು

**(1ನೇ ಪುಟದಿಂದ)** ರಾಜನಾಥ್ ಅವರು ಬಂಜಾರ ಗುರು ಪೀಠದ ಪೀಠಾಧಿಪತಿ ಸರ್ದಾರ್ ಸೇವಾಲಾಲ್ ಶ್ರೀ ಒಡನಾಡಿಯಾಗಿದ್ದರು. ಇವರು ಕಳೆದ 7 ವರ್ಷಗಳಿಂದ ಚಿತ್ರದುರ್ಗದ ಬಂಜಾರ ಗುರು ಪೀಠದಲ್ಲಿ ನೆಲೆಸಿದ್ದರು. ಕಳೆದ 15 ದಿನಗಳ ಹಿಂದಷ್ಟೇ ಮಹಾಕುಂಭಮೇಳಕ್ಕೆ ಹೋಗಿದ್ದರು ಎಂದು ತಿಳಿದುಬಂದಿದೆ. ಇದೀಗ ಅವರ ಪಾರ್ಥಿವ ಶರೀರವನ್ನು ಚಿತ್ರದುರ್ಗಕ್ಕೆ ತರಬೇಕೆಂದು ಚಿತ್ರದುರ್ಗದ ಲಂಬಾಣಿ ಸೇವಾಲಾಲ್ ಗುರುಪೀಠದ ಪೀಠಾಧಿಪತಿ ಮನವಿ ಮಾಡಿದ್ದಾರೆ. ಈ ಬಗ್ಗೆ ಚಿತ್ರದುರ್ಗದ ಲಂಬಾಣಿ ಸೇವಾಲಾಲ್ ಗುರುಪೀಠದ ಪೀಠಾಧಿಪತಿ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಅವರು ಮಾಧ್ಯಮಗಳೊಂದಿಗೆ ಮಾತನಾಡಿದ್ದು, 'ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿರುವ ರಾಜನಾಥ್ ಮಹಾರಾಜ್ ಪಾರ್ಥಿವ ಶರೀರವನ್ನು ಚಿತ್ರದುರ್ಗಕ್ಕೆ ತಲುಪಿಸಬೇಕೆಂದು ಉತ್ತರ ಪ್ರದೇಶ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಅಲ್ಲದೇ ಆದಷ್ಟು ಬೇಗ ಪಾರ್ಥಿವ ಶರೀರ ತರಿಸುವಂತೆ ಕರ್ನಾಟಕ ಸರ್ಕಾರಕ್ಕೂ ಸಹ ಒತ್ತಾಯಿಸಲಾಗಿದೆ ಎಂದು ಹೇಳಿದ್ದಾರೆ.

ಅಂತೆಯೇ ಕಾಲ್ತುಳಿತ ದಂತಹ ದುರ್ಘಟನೆಗಳು ಮತ್ತೆ ಸಂಭವಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ರಾಜ್ ನಾಥ್ ಮಹಾರಾಜ್ ಸಿದ್ಧಿ ಸಾಧಕರಾಗಿದ್ದರು. ಕುಂಭಮೇಳದಲ್ಲಿ ಕಾಲ್ತುಳಿತಕ್ಕೆ ಸಿಲುಕಿದ ರಾಜ್‌ನಾಥ್ ಸಾವೆಂಬುದು ನಂಬಲು ಆಗುತ್ತಿಲ್ಲ. ನಾಗ ಸಾಧುಗಳ ಪಾರ್ಥಿವ ಶರೀರ ಅನಾಥವಾಗಿ ಬಿದ್ದಿರೋ ದು ಬೇಸರ ತಂದಿದೆ. ನಮ್ಮನ್ನು ಕುಂಭಮೇಳ ಕ್ಕೆ ಆಹ್ವಾನಿಸಿದ್ದರು. ಕುಂಭಮೇಳಕ್ಕೆ ಹೋಗಬೇಕು, ಸಾಧು - ಸಂತರ ದರ್ಶನ ಪಡೆಯಬೇಕು, ಪುಣ್ಯ ಸ್ನಾನ ಮಾಡಬೇಕು ಎನ್ನುತ್ತಿದ್ದರು. ನಾಗಸಾಧುಗಳ ಮಾತು ನೆನೆದರೆ ದುಃಖ ಆಗುತ್ತಿದೆ. ಸಿದ್ಧಿಸಾಧಕರ ಪಾರ್ಥಿವ ಶರೀರ ಚಿತ್ರದುರ್ಗಕ್ಕೆ ಬರಬೇಕು. ಪಾರ್ಥಿವ ಶರೀರದ ಅಂತ್ಯ ಸಂಸ್ಕಾರವನ್ನು ವಿಧಿವಿಧಾನಗಳೊಂದಿಗೆ ಮಾಡದಿದ್ದರೆ ಅಗೌರವವಾಗುತ್ತದೆ. ಗುರು ಪರಂಪರೆಗೆ ಅಪಮಾನವಾಗುತ್ತದೆ ಎಂದು ಹೇಳಿದರು.



## ರಾಷ್ಟ್ರಪತಿ...

ನವದೆಹಲಿ: ಬಜೆಟ್ ಅಧಿವೇಶನದ ಮೊದಲ ದಿನದಂದು ಸಂಸತ್ತಿನ ಎರಡೂ ಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ರಾಷ್ಟ್ರಪತಿ ದ್ರೌಪದಿ ಮುರ್ಮು ಸಂಸತ್ ಭವನದ ಸಂಕೀರ್ಣಕ್ಕೆ ಆಗಮಿಸುತ್ತಿರುವುದು.












## ಜನ್ಮದಿನದ ಶುಭಾಶಯಗಳು




ವಿನಾಯಕ ರೈಸ್ ಮಿಲ್ ಮಾಲೀಕರಾದ
**ಶ್ರೀ ವಿ. ಸಿದ್ದೇಶ್**
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

✦ ತಾಳದಾರ ರಾಜಣ್ಣ ✦ ಬೀಡಾ ಅಂಗಡಿ ಪ್ರಕಾಶಣ್ಣ
✦ ಕರೂರು ನಾಗರಾಜಣ್ಣ ✦ ಮಹೇಶಣ್ಣ ಜಿ.ಕೆ.
✦ ಕೋಟೆಪ್ಪ ✦ ನೀಲಕಂಠಪ್ಪ ✦ ಅನಂತಣ್ಣ
✦ ನಾಗಣ್ಣ ಸಿದ್ದಲಿಂಗೇಶ್ವರ ರೈಸ್ ಮಿಲ್
✦ ಗಣೇಶ್ ಭವನ ಉಮೇಶಣ್ಣ ✦ ಮಿಲ್ರಿ ಮಂಜಣ್ಣ
✦ ಹಿಟ್ಟಿನಗಿರಣಿ ರಾಮಣ್ಣ
✦ ಸತ್ಯನಾರಾಯಣಪ್ಪ ಬಾಲಾಜಿ ಸ್ವೀಟ್ಸ್
✦ ಸೂರ್ಯನಾರಾಯಣಪ್ಪ, ನಂದಿತಾವರೆ
✦ ಕಾರ್ ಮಲ್ಲಣ್ಣ
✦ ಹಡಗಲಿ ಸತ್ಯನಾರಾಯಣಪ್ಪನವರು

**ಜಿ. ವೇದಮೂರ್ತಿ (ಮೂರ್ತ್ಯಪ್ಪನವರ ಸ್ನೇಹ ಬಳಗ)**



## WANTED
**MARKETING EXECUTIVES**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್
*Contact :*
**S S INDUSTRY**
Industrial Area, Lokikere Road, Davangere.
**Ph : 96865 51303, 96865 51301**


# ಗೃಹ ಸಚಿವರ ಕ್ಷೇತ್ರದಲ್ಲೇ ಮೈಕ್ರೊ ಫೈನಾನ್ಸ್ ಹಾವಳಿ.!

ಬೆಂಗಳೂರು,ಜ.31- ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ವಿಧಾನಸಭಾ ಕ್ಷೇತ್ರದಲ್ಲೇ ಮೈಕ್ರೋ ಫೈನಾನ್ಸ್ ಹಾವಳಿ ಎಲ್ಲೆ ಮೀರಿದೆಯಂತೆ.

ಸುದ್ದಿಗಾರರಿಗೆ ಗೃಹ ಸಚಿವರೇ ಈ ಮಾಹಿತಿ ನೀಡಿದ್ದಲ್ಲದೆ, ಇವರ ಕಿರುಕುಳ ತಾಳಲಾರದೆ ಕೆಲವರು ಊರೇ ಬಿಟ್ಟು ಹೋಗಿದ್ದಾರೆ, ನನಗೆ ಮಾಹಿತಿ ತಿಳಿಯುತ್ತಿದ್ದಂತೆ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ, ಮನ ಬಂದಂತೆ ಬಡ್ಡಿ ವಸೂಲಿ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದೇನೆ.

ಕ್ಷೇತ್ರದಲ್ಲಿ 2.50 ಲಕ್ಷ ರೂ. ಸಾಲ ತೆಗೆದು ಕೊಂಡಿದ್ದಾರೆ, ಅದಕ್ಕೆ 4.50 ಲಕ್ಷ ರೂ. ವಾಪಸ್ ಕಟ್ಟಿದ್ದಾರೆ, ಆದರೂ ಇನ್ನು 80 ಸಾವಿರ ರೂ. ಕಟ್ಟಬೇಕು ಅಂತ ಮನೆಗೆ ಬೀಗ ಹಾಕಿ, ಮನೆ ಮೇಲೆ ಅಂಟಿಸಿದ್ದಾರೆ, ಕುಟುಂಬಸ್ಥರು ಊರು ಬಿಟ್ಟು ಹೋಗಿದ್ದರು, ನನ್ನ ಗಮನಕ್ಕೆ ಬರುತ್ತಿದ್ದಂತೆ ಕ್ರಮ ತೆಗೆದುಕೊಂಡಿದ್ದೀನಿ.

ಮನೆ ಬಿಟ್ಟು ಹೋಗಿದ್ದವರನ್ನು ವಾಪಸ್ ಕರೆತರಲಾಗಿದೆ, ಮನೆಗೆ ಪೇಂಟ್ ಮಾಡಿಸಿಕೊಡಲಾಗಿದೆ, ಇಂತಹ ಘಟನೆಗಳನ್ನು ನಿಲ್ಲಿಸಲು ಕಾನೂನು ಬೇಕು.

ಮೈಕ್ರೋ ಫೈನಾನ್ಸ್‌ಗೆ ಸಂಬಂಧಿಸಿದ ಕಾನೂನುಗಳು ಈಗಾಗಲೇ ಇವೆ, ಅವುಗಳನ್ನು ಹೊಸ ಕಾನೂನಿಗೆ ಹೇಗೆ ಸೇರಿಸಬಹುದೆಂಬುದನ್ನು ಪರಿಶೀಲಿಸಲು ಮುಖ್ಯಮಂತ್ರಿ ಸೂಚಿಸಿದ್ದು ಎರಡು-ಮೂರು ದಿನಗಳಲ್ಲಿ ಅಂತಿಮಗೊಳ್ಳಲಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಮುಖ್ಯಮಂತ್ರಿಗಳ ಕಾನೂನು ಕಾರ್ಯದರ್ಶಿ ಹಾಗೂ ಸಂಸದೀಯ ಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ, ಶೀಘ್ರವಾಗಿ ಹೊಸ ಕಾನೂನು ಮಾಡಲಿದ್ದಾರೆ, ಮೈಕ್ರೋ ಫೈನಾನ್ಸ್ ಸಂಸ್ಥೆಗಳು ವಸೂಲಿ ಸಂದರ್ಭದಲ್ಲಿ ದೌರ್ಜನ್ಯ ಎಸಗುತ್ತಿರುವುದರಿಂದ ಸಾಲಗಾರರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದ್ದು, ಊರು ಬಿಟ್ಟು ಹೋಗುತ್ತಿದ್ದಾರೆ, ಇದು ನಿಲ್ಲಬೇಕಿದೆ, ಇದಕ್ಕೆ ಮುಖ್ಯವಾಗಿ ಕಾನೂನು ತರಬೇಕಿದೆ ಎಂದರು.

ಆರ್‌ಬಿಐ ನಿಯಮಾವಳಿ ಬಿಟ್ಟು ಫೈನಾನ್ಸ್ ಕಂಪನಿಗಳು ಬಡ್ಡಿ ವಸೂಲಿ ಮಾಡುತ್ತಿದ್ದರೆ, ಸಾಲ ಪಡೆದವರು ಎದೆಗುಂದಬೇಡಿ, ಧೈರ್ಯವಾಗಿರಿ. ಅವರ ಕಿರುಕುಳಕ್ಕೆ ಹೆದರಿ ಆತ್ಮಹತ್ಯೆಗೆ ಶರಣಾಗಬೇಡಿ, ಮನೆ ಬಿಟ್ಟೂ ಹೋಗಬೇಡಿ, ನಿಮ್ಮ ರಕ್ಷಣೆಗೆ ನಾವಿದ್ದೇವೆ.

ತಿದ್ದುಪಡಿ ಕಾನೂನು ತರುವವರೆಗೂ ಸ್ವಲ್ಪ ಕಾಲಾವಕಾಶ ಕೊಡಿ, ಆದರೆ, ನೀವು ಅವರಿಗೆ ಅಂಜುವುದು ಬೇಡ, ನಿಮ್ಮ ಮೇಲೆ ಗದಾ ಪ್ರಹಾರ ಮಾಡಿದರೆ ತಕ್ಷಣ ಜಿಲ್ಲಾಡಳಿತದ ಗಮನಕ್ಕೆ ತನ್ನಿ ಎಂದಿದ್ದಾರೆ.

ಮೈಕ್ರೋ ಫೈನಾನ್ಸ್ ಕಂಪನಿಗಳು ರಾಜ್ಯದಲ್ಲಿ 59 ಸಾವಿರ ಕೋಟಿ ರೂ. ಸಾಲ ಕೊಟ್ಟಿದ್ದಾರೆ, ಆ ಬಗ್ಗೆ ಹೆಚ್ಚು ಒತ್ತು ನೀಡುವುದಿಲ್ಲ, ಕೂಡಲೇ ಕಾನೂನು ತಂದು ದೌರ್ಜನ್ಯ ತಡೆಯಬೇಕಿದೆ.

ಮೈಕ್ರೋ ಫೈನಾನ್ಸ್‌ಗಳು ನ್ಯಾಯಾಲಯದ ಮೊರೆ ಹೋಗುತ್ತಾರೆ ಎಂಬುದು ಗಮನಕ್ಕೆ ಬಂದಿದೆ, ಅವರು ಕೋರ್ಟ್‌ಗೆ ಹೋಗದಿರುವಂತಹ ಕಾನೂನು ಮಾಡಬೇಕಿದೆ, ಈ ಕುರಿತು ಸಭೆಯಲ್ಲಿ ಚರ್ಚಿಸಿದ್ದೇವೆ ಎಂದರು.

ವಿಧಾನ ಪರಿಷತ್ ಸದಸ್ಯರ ನಾಮನಿರ್ದೇಶನ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರನ್ನು ನಾಮನಿರ್ದೇಶನ ಮಾಡುವಾಗ ನಮ್ಮ ಪಕ್ಷದಲ್ಲಿ ಕೆಲವು ಪದ್ಧತಿಗಳಿವೆ, ಎಲ್ಲರ ಪರವಾಗಿ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರು ಮಾಡುತ್ತಾರೆ ಎಂದರು.

ನಿಗಮ-ಮಂಡಳಿಗೆ ಸದಸ್ಯರ ಆಯ್ಕೆ ಅಂತಿಮಗೊಳಿಸಿ, ಪಟ್ಟಿಯನ್ನು ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರಿಗೆ ನೀಡಿದ್ದೇನೆ, ಕಾರ್ಯಕರ್ತರನ್ನೂ ಅಧ್ಯಕ್ಷರನ್ನಾಗಿ ಮಾಡಬೇಕಿದೆ.

ಸಚಿವರಾದ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ, ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ಸಭೆ ನಡೆಸಿಲ್ಲ, ವಾಲ್ಮೀಕಿ ಸಮುದಾಯದ ಸ್ವಾಮೀಜಿ ಜಾತ್ರೆಗೆ ಆಹ್ವಾನಿಸಲು ವಿಧಾನಸೌಧದ ನನ್ನ ಕಾರ್ಯಾಲಯಕ್ಕೆ ಬಂದಿದ್ದರು, ಆ ವೇಳೆಗೆ ಸ್ವಾಮೀಜಿಯವರು ನನ್ನ ಕಾರ್ಯಾಲಯದಲ್ಲಿ ಇರುವ ವಿಚಾರ ತಿಳಿದು ರಾಜಣ್ಣ, ಸತೀಶ್ ಜಾರಕಿಹೊಳಿ ಬಂದಿದ್ದರು, ಸ್ವಾಮೀಜಿ ಆಶೀರ್ವಾದ ಪಡೆದು ಹೋದರು ಎಂದರು.

## ಆಮ್ ಆದ್ಮಿ ಪಾರ್ಟಿಯ ಏಳು ಶಾಸಕರ ರಾಜೀನಾಮೆ

ನವದೆಹಲಿ, ಜ. 31 - ದೆಹಲಿ ವಿಧಾನಸಭಾ ಚುನಾವಣೆ ಐದು ದಿನಗಳಿರುವಂತೆಯೇ ಆಮ್ ಆದ್ಮಿ ಪಾರ್ಟಿಯ ಏಳು ಶಾಸಕರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಚುನಾವಣೆಯಲ್ಲಿ ಟಿಕೆಟ್ ದೊರೆಯದ ಕಾರಣ ಬೇಸರಗೊಂಡು ಇವರು ರಾಜೀನಾಮೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಈ ಶಾಸಕರ ಪರ ಉತ್ತಮ ಅಭಿಪ್ರಾಯ ವ್ಯಕ್ತವಾಗಿರಲಿಲ್ಲ. ಹೀಗಾಗಿ ಅವರಿಗೆ ಟಿಕೆಟ್ ನೀಡಲಿಲ್ಲ ಎಂದು ಆಮ್ ಆದ್ಮಿ ಪಾರ್ಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.



## ನಾಗನೂರು ಉಮಾ ಮಹೇಶ್ವರ ಸೇವಾ ಟ್ರಸ್ಟ್‌ಗೆ ನೇಮಕ

ದಾವಣಗೆರೆ, ಜ. 31 - ಗ್ರಾಮದ ಸರ್ವಾಂಗೀಣ ಅಭಿವೃದ್ಧಿ, ದೇವಸ್ಥಾನಗಳ ನಿರ್ವಹಣೆ, ಪ್ರತಿಭಾವಂತ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಹಸ್ತ ನೀಡುವುದು ಸೇರಿದಂತೆ, ವಿವಿಧ ಸಾಮಾಜಿಕ ಉದ್ದೇಶದಿಂದ ತಾಲ್ಲೂಕಿನ ನಾಗನೂರು ಗ್ರಾಮದಲ್ಲಿ ಶ್ರೀ ಉಮಾ ಮಹೇಶ್ವರ ಸೇವಾ ಟ್ರಸ್ಟ್ ಸ್ಥಾಪಿಸಿ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಟ್ರಸ್ಟ್‌ನ ಗೌರವಾಧ್ಯಕ್ಷರಾಗಿ ಗ್ರಾಮದ ಹಿರಿಯರಾದ ಎಂ.ಜಿ. ಮಹೇಶ್ವರಪ್ಪ, ಹೆಚ್. ಬಸವರಾಜಪ್ಪ, ಆವರಗೆರೆ ಹನುಮಂತಪ್ಪ, ಎನ್.ಎಂ. ಮಹೇಶ್ವರಯ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಅಧ್ಯಕ್ಷರಾಗಿ ಎನ್.ಡಿ. ಮಲ್ಲಿಕಾರ್ಜುನ, ಉಪಾಧ್ಯಕ್ಷರುಗಳಾಗಿ ಎ. ಅಂಜಿನಪ್ಪ, ಚನ್ನಾಚಾರಿ, ಟಿ.ಎನ್. ರಾಮಚಂದ್ರಪ್ಪ, ಹೆಚ್. ನಿಂಗಪ್ಪ ನೇಮಕಗೊಂಡಿದ್ದಾರೆ.

ಕಾರ್ಯದರ್ಶಿಗಳಾಗಿ ಎನ್.ಕೆ. ಅರುಣ್ ಕುಮಾರ್, ಎನ್.ಜಿ.ಶಶಿಕುಮಾರ್, ಕನ್ವೀನರ್ ಆಗಿ ಕೆ. ಮಂಜು ನಾಥ್, ಖಜಾಂಚಿಯಾಗಿ ಡಿ.ಎಸ್.ಜ್ಞಾನಮೂರ್ತಿ, ಡಿ. ನಾಗರಾಜ್ ಮತ್ತು ಸಹ ಟ್ರಸ್ಟಿಗಳಾಗಿ ಎನ್.ಡಿ.ನಾಗರಾಜಪ್ಪ, ಎಂ.ಎನ್. ಮಲ್ಲಿಕಾರ್ಜುನ, ಎನ್.ಎನ್. ಕಲ್ಲೇಶ್, ಎ. ರಾಜು,ಕೆ.ಶಿವಕುಮಾರ್, ಕಲ್ಲೇಶ್ ಪತ್ರೆ, ರೇವಣಸಿದ್ದಪ್ಪ ಬಣಕಾರ್, ಬಸವರಾಜ್ ಹೊಳೆಯಪ್ಪರ, ಎಸ್.ಎಚ್. ವಿಶ್ವನಾಥ್, ಕರಿಹಾಲಪ್ಪ ಮತ್ತು ಜರೀಕಟ್ಟೆ ಚಂದ್ರಪ್ಪ ಅವರನ್ನು ನೇಮಕ ಮಾಡಲಾಗಿದೆ.

## ಸರ್ಕಾರದ ಮೂರನೇ ಅವಧಿಯಲ್ಲಿ ಮೂರು ಪಟ್ಟು ಕೆಲಸ : ಮುರ್ಮು

ನವದೆಹಲಿ, ಜ. 31 - ತಮ್ಮ ಸರ್ಕಾರದ ಮೂರನೇ ಅವಧಿಯಲ್ಲಿ ಕೆಲಸದ ವೇಗ ಮೂರು ಪಟ್ಟು ಹೆಚ್ಚಾಗಿದೆ. ಆರ್ಥಿಕತೆಯನ್ನು ನೀತಿಗಳ ನಿಷ್ಕ್ರಿಯತೆಯಿಂದ ಮೇಲಕ್ಕೆತ್ತಲು ಬದ್ಧತೆಯಿಂದ ಕೆಲಸ ಮಾಡಲಾಗುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಮುಖ ನಿರ್ಧಾರಗಳನ್ನು ತ್ವರಿತವಾಗಿ ತೆಗೆದುಕೊಳ್ಳಲಾಗುತ್ತಿದೆ. ನೀತಿಗಳನ್ನು ಅಸಾಧಾರಣ ವೇಗದಲ್ಲಿ ಜಾರಿಗೆ ತರಲಾಗುತ್ತಿದೆ. ಬಡವರು, ಮಧ್ಯಮ ವರ್ಗದವರು, ಯುವಕರು, ಮಹಿಳೆಯರು ಹಾಗೂ ರೈತರಿಗೆ ಅತಿ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು. ದೇಶದ ಬೆಳವಣಿಗೆಯ ಈ ಅಮೃತ ಕಾಲದಲ್ಲಿ ಅಭೂತಪೂರ್ವ ಸಾಧನೆ ಮಾಡಲು ತಮ್ಮ ಸರ್ಕಾರ ಹೊಸ ಚೈತನ್ಯ ತುಂಬುತ್ತಿದೆ ಎಂದವರು ಹೇಳಿದರು.

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಕಾಲ್ತುಳಿತಕ್ಕೆ ಸಿಲುಕಿ 30 ಯಾತ್ರಿಗಳು ಸಾವನ್ನಪ್ಪಿರುವ ಬಗ್ಗೆ ಅವರು ಶ್ರದ್ಧಾಂಜಲಿ ಸಲ್ಲಿಸಿದರು. ಇತ್ತೀಚೆಗೆ ನಿಧನರಾದ ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರಿಗೂ ಶ್ರದ್ಧಾಂಜಲಿ ಸಲ್ಲಿಸಿದರು.

3 ಕೋಟಿ ಕುಟುಂಬಗಳಿಗೆ ಹೆಚ್ಚುವರಿಯಾಗಿ ಮನೆಗಳನ್ನು ನಿರ್ಮಿಸಿರುವುದು, ಬುಡಕಟ್ಟು ಜನರ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳು, ಗ್ರಾಮೀಣ ಜನರಿಗೆ ಆಸ್ತಿ ಕಾರ್ಡುಗಳನ್ನು ವಿತರಿಸಿರುವುದು, ಗ್ರಾಮೀಣ ರಸ್ತೆಗಳ ನಿರ್ಮಾಣ ಹಾಗೂ 70 ವರ್ಷ ಮೀರಿದ ಆರು ಕೋಟಿ ನಾಗರಿಕರಿಗೆ ಆರೋಗ್ಯ ವಿಮೆ ಒದಗಿಸಿರುವ ಸಾಧನೆಗಳನ್ನು ರಾಷ್ಟ್ರಪತಿ ಪ್ರಸ್ತಾಪಿಸಿದರು.

ಒಂದು ದೇಶ - ಒಂದು ಚುನಾವಣೆ ಹಾಗೂ ವಕ್ಫ್ ಕಾಯ್ದೆ ತಿದ್ದುಪಡಿ ಸೇರಿದಂತೆ ಹಲವು ಮಹತ್ವದ ವಿಷಯಗಳಲ್ಲಿ ಸರ್ಕಾರ ತ್ವರಿತವಾಗಿ ಕ್ರಮ ತೆಗೆದುಕೊಂಡಿದೆ ಎಂದವರು ತಿಳಿಸಿದರು.

ಜಾಗತಿಕ ಅಸ್ಥಿರತೆಯ ಈ ಸಮಯದಲ್ಲಿ ಭಾರತವು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಿರತೆಗೆ ಉದಾಹರಣೆಯಾಗಿ ಹೊರಹೊಮ್ಮುತ್ತಿದೆ ಎಂದು ಮುರ್ಮು ಹೇಳಿದರು.

ಭಾರತದ ಶಕ್ತಿ, ನೀತಿ ಹಾಗೂ ಉದ್ದೇಶಗಳಲ್ಲಿ ವಿಶ್ವ ನಂಬಿಕೆ ಇರಿಸಿದೆ ಎಂದು ತಿಳಿಸಿದರು. ದಲಿತರು, ಹಿಂದುಳಿದ ವರ್ಗದವರು ಹಾಗೂ ಬುಡಕಟ್ಟು ಜನರು ಸರ್ಕಾರದ ಹಲವಾರು ಯೋಜನೆಗಳ ಅತಿ ದೊಡ್ಡ ಫಲಾನುಭವಿಗಳು ಎಂದು ಮುರ್ಮು ತಿಳಿಸಿದರು.

## IN THE COURT HON'BLE II ADDL., CIVIL JUDGE & JMFC AT DAVANAGERE

**FDP No : 23/2023**

Petitoners 1. Smt Kumari w/o Kumar Naik aged about 41 years R/O # 1844, Chikkammani Devaraj Urs Layout, Davanagere 2. Kum,. Pramila D/O Late Umapathi Naik aged about 29 years, R/O # 1844, Chikkammani Devaraj Urs Layout, Davanagere 3. Chi. Bharath Naik, S/O Late Umapathi Naik, aged about 25 years, R/O # 1844, Chikkammani Devaraj Urs Layout, Davanagere VERSES Respondents No : 1. Kum. Kavitha D/O Umapathi Naik aged about 28 years, R/O # 1354, 6th Cross, Bharath Colony, Davanagere.

**SUMMONS/NOTICE UNDER ORDER-V RULE - 20 OF CPC**

Where petioners has filed the above petition against you Respondent No. 1 and such other persons by seeking Final decree based on Preliminary Decree passed in O.S. No. 477/2012 before the Hon'ble II Additional Civil Judge & JMFC at Davanagere. You Respodent No. 1 is hereby directed to appear in this court in person by advocate on 4.03.2025 fore noon at 11 am to defend yourself, falling which the suit will be heard and determined in your absence / Ex-Parte. Given under my hand seal of this court on 15 day of 2025

**KGK Swamy, S.G. Mahaveer**
Advocates, Law Solutions
# 417/4A, 4B, 1st Floor, Benakeesh Plaza,
Dixit Road, K.B. Extension, Davanagere-1

By Order of Court **(Maruthi)**
Chief Ministrial Officer Principal
Sr. Civil Judger at JMFC Davanagere.

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ನಂದಿ ಮತ್ತು ಗುಪ್ತ ಸೇಲ್ಸ್ ಕಾರ್ಪೊರೇಷನ್ ಪಾಲುದಾರರಾದ ಶ್ರೀ ಕಾಂತರಾಜ ಎಂ.ಬಿ. ಬಿನ್ ಎಂ. ಬಸವರಾಜಪ್ಪ (ಮೊ.ನಂ. 7406740635) ವಾಸ : ಎಪಿಎಂಸಿ ಯಾರ್ಡ್ ದಾವಣಗೆರೆ ವಾಸಿ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ :-

ಮೇಲ್ಕಂಡ ನನ್ನ ಕಕ್ಷಿದಾರರು ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧ ಪಟ್ಟಂತೆ ಎಪಿಎಂಸಿ ಕಮಿಟಿಯವರು ಈ ಹಿಂದೆ ಹೆಚ್. ರುದ್ರಪ್ಪ ಅಂಡ್ ಸನ್ಸ್ ಇವರಿಗೆ ದಿನಾಂಕ : 27.02.2024 ರಂದು ಎಸ್.ಆರ್.ನಂ. 22304/2023-24ರಂತೆ ಬರೆದುಕೊಟ್ಟಿರುವ ಅಸಲು ಗುತ್ತಿಗೆ ಸಹಿತ ಮಾರಾಟ ಒಪ್ಪಂದ ಪತ್ರ ಮತ್ತು ದಿನಾಂಕ : 16.04.2022 ರಂದು ಎಸ್.ಆರ್.ನಂ. 4082/2022-23 ರ ಕಂಡೀಷನಲ್ ಸೇಲ್ ಡೀಡ್ ದಾಖಲೆಗಳು ನನ್ನ ಕಕ್ಷಿದಾರರು ದಿನಾಂಕ : 29.01.2025 ರಂದು ದಾವಣಗೆರೆಯ ಎಪಿಎಂಸಿ ಯಾರ್ಡ್ ಹತ್ತಿರ ಇರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಲು ತೆಗೆದುಕೊಂಡು ಹೋದಾಗ ಆಕಸ್ಮಿಕವಾಗಿ ಮೇಲ್ಕಂಡ ಅಸಲು ದಾಖಲೆಗಳು ಕಳೆದು ಹೋಗಿರುತ್ತವೆ. ಸದರಿ ಅಸಲು ದಾಖಲೆಗಳನ್ನು ಸಾಕಷ್ಟು ಬಾರಿ ಹುಡುಕಿದರೂ ಸಿಗದೇ ಇರುವ ಕಾರಣ ಈ ಬಗ್ಗೆ ನನ್ನ ಕಕ್ಷಿದಾರರು ದಿನಾಂಕ : 31.01.2025 ರಂದು ದೂರು ದಾಖಲಿಸಿರುತ್ತಾರೆ. ಸದರಿ ಮೇಲ್ಕಂಡ ಅಸಲು ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ವಕೀಲರನ್ನಾಗಲೀ ಸಂಪರ್ಕಿಸಿ ಅವುಗಳನ್ನು ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ. ಸದರಿ ಸ್ವತ್ತಿನ ಬಗ್ಗೆ ಯಾರದೇ ಆಗಲಿ ತಂಟೆ - ತಕರಾರು ಅಥವಾ ಹಕ್ಕು ಹಿತಾಸಕ್ತಿ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 7 ದಿನಗಳೊಳಗಾಗಿ ಕೂಡಲೇ ಕೆಳಕಂಡ ವಕೀಲರನ್ನು ಅಥವಾ ನನ್ನ ಕಕ್ಷಿದಾರರನ್ನು ಸಂಪರ್ಕಿಸಬೇಕಾಗಿ ಈ ಮೂಲಕ ಪ್ರಕಟಿಸಲಾಗಿದೆ.

**ಷೆಡ್ಯೂಲ್** : ದಾವಣಗೆರೆ ಸಿಟಿ, 4ನೇ ವಾರ್ಡ್, 6ನೇ ಡಿವಿಜನ್, ಎಪಿಎಂಸಿ ಮಾರುಕಟ್ಟೆ 'ಇ' ಬ್ಲಾಕ್‌ನಲ್ಲಿ ಬರುವ ಸೈಟ್ ನಂ. ಇ-105, ಡೋರ್ ನಂ. 1214/ಇ-105, ಸ್ವತ್ತಿನ ಸಂಖ್ಯೆ : 7563166367 ವಿಸ್ತೀರ್ಣ 13.716027x36.576073 ಮೀಟರ್ = 501.6762 ಚ.ಮೀ.ವುಳ್ಳ ವಾಣೀಜ್ಯೋಪಯೋಗಿ ಸ್ವತ್ತಿಗೆ ಚಕ್ಕುಬಂದಿ :- ಪೂರ್ವಕ್ಕೆ : ನಿವೇಶನ ಸಂಖ್ಯೆ ಇ-106, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ ಇ-104, ಉತ್ತರಕ್ಕೆ : ನಿವೇಶನ ಸಂಖ್ಯೆ ಎಫ್ - 13, ದಕ್ಷಿಣಕ್ಕೆ : ರಸ್ತೆ

ಎ.ಎಂ. **ಹೆಗಡೆ** (ವಕೀಲರು)
# 82/18, 1ನೇ ಫ್ಲೋರ್, ಹತ್ತಿರ ಅರುಣ ಟಾಕೀಸ್,
ದಿನಾಂಕ : 31.01.2025 ಪಿ.ಬಿ. ರೋಡ್, ದಾವಣಗೆರೆ. ಮೊ : **94483 05888**



## ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ (ರಿ)

ಭಾಯಾಗಡ್ ಸೂರಗೊಂಡನಕೊಪ್ಪ, ನ್ಯಾಮತಿ ತಾಲ್ಲೂಕು.

### ಹರಾಜು ಪ್ರಕಟಣೆ

ಸಂತ ಸೇವಾಲಾಲ್‌ರ 286 ನೇ ಜಯಂತ್ಯೋತ್ಸವವು ದಾವಣಗೆರೆ ಜಿಲ್ಲೆ, ನ್ಯಾಮತಿ ತಾಲ್ಲೂಕು, ಸೂರಗೊಂಡನಕೊಪ್ಪದ, "ಭಾಯಾಗಡ್" ಪುಣ್ಯಕ್ಷೇತ್ರದಲ್ಲಿ 2025ರ ಫೆಬ್ರವರಿ 13, 14 ಮತ್ತು 15 ರಂದು ನಡೆಯಲಿದೆ. ಈ ಜಯಂತ್ಯೋತ್ಸವಕ್ಕೆ ಲಕ್ಷಾಂತರ ಭಕ್ತಾದಿಗಳು ಭಾಗವಹಿಸುವರು. ಈ ಜಾತ್ರಾ ಮಹೋತ್ಸವದ ವೇಳೆ ಪೂಜಾ ಸಾಮಗ್ರಿ ಸೇರಿದಂತೆ ಅಂಗಡಿ ಮುಂಗಟ್ಟುಗಳನ್ನು ಇಡುವವರಿಗೆ ಜಾಗದ ಹರಾಜು ಇಸ್ತಿಹಾರನ್ನು ಪ್ರಕಟಿಸಲಾಗಿದೆ. ಈ ಹರಾಜನ್ನು **ಸಂತ ಸೇವಾಲಾಲ್ ಮಹಾಮಠ ನಿರ್ವಹಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಎನ್. ಹನುಮಂತನಾಯ್ಕ** ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಹರಾಜಿನಲ್ಲಿ ಭಾಗವಹಿಸುವವರು ಮುಂಗಡ 20000=00 (ಇಪ್ಪತ್ತು ಸಾವಿರ) ಠೇವಣಿ ಕಟ್ಟತಕ್ಕದ್ದು ಮತ್ತು ಅತೀ ಹೆಚ್ಚಿನ ಬಿಡ್‌ದಾರರಿಗೆ ಆದೇಶ ನೀಡಲಾಗುವುದು ಹಾಗು ಸ್ಥಳದಲ್ಲಿಯೇ ಪೂರ್ಣ ಮೊತ್ತ ಪಾವತಿಸತಕ್ಕದ್ದು, ಪಾವತಿಸದಿದ್ದಲ್ಲಿ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ನಂತರದ ಬಿಡ್ಡುದಾರರಿಗೆ ನಿಯಮಾವಳಿ ರೀತ್ಯ ಆದೇಶ ನೀಡಲಾಗುವುದು.

**ಹರಾಜಿನ ವಿವರ ಈ ಕೆಳಕಂಡಂತಿದೆ.**

1. ಪೂಜಾ ಸಾಮಗ್ರಿಗಳ ಅಂಗಡಿಗಳು 2. ಅಂಗಡಿ ಮುಂಗಟ್ಟುಗಳು 3. ಪ್ರಸಾದ ವಿತರಣೆ 4. ಆಟದ ಸಾಮಾನು 5. ಒಡೆದ ತೆಂಗಿನಕಾಯಿ, 6. ಗೋಶಾಲೆಯ ಗೊಬ್ಬರ ಹರಾಜು.

ಈ ಮೇಲಿನ ಕ್ರಮ ಸಂಖ್ಯೆ 1 ರಿಂದ 6 ವಿಷಯಕ್ಕೆ ಸಂಬಂಧಿಸಿದಂತೆ ಅತಿ ಹೆಚ್ಚು ಬಿಡ್‌ದಾರರಿಗೆ ಆದೇಶ ನೀಡಲಾಗುವುದು, ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ (ರಿ) ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ. ಬಿಡ್ ಅನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಸಮಿತಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ದಿನಾಂಕ:05/02/2025 ರ ಬುಧವಾರ ಬೆಳಿಗ್ಗೆ 10.00 ಘಂಟೆಯ ಒಳಗೆ ಬಿಡ್‌ದಾರರು ಸಮಿತಿಯ ಕಛೇರಿಯಲ್ಲಿ ಮುಂಗಡ ಹಣ ಪಾವತಿಸತಕ್ಕದ್ದು, ನಂತರ ಬಂದು ಹಣ ಪಾವತಿಸಿದರೆ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

* ಈ ಹರಾಜು ಪ್ರಕ್ರಿಯೆಯು ಸಮಿತಿಯ ನಿಯಮಾವಳಿಗೆ ಒಳಪಟ್ಟಿರುತ್ತದೆ.

**ಹರಾಜು ನಡೆಯುವ ಸ್ಥಳ:** ಸಂತ ಸೇವಾಲಾಲ್ ಮಹಾಮಠದ ಆವರಣ 'ಭಾಯಾಗಡ್' ಸೂರಗೊಂಡನಕೊಪ್ಪ, ಚಿನ್ನಿಕಟ್ಟೆ ಅಂಚೆ, ನ್ಯಾಮತಿ ತಾ. ದಾವಣಗೆರೆ ಜಿ|| ದಿನಾಂಕ:05/02/2025 ರ ಬುಧವಾರ ಸಮಯ ಬೆಳಿಗ್ಗೆ 11 ಘಂಟೆಗೆ.

**ಸಂಪರ್ಕಿಸುವ ದೂರವಾಣಿ ಸಂಖ್ಯೆ :**
1. ಶ್ರೀ ಎನ್ ಹನುಮಂತನಾಯ್ಕ ಮಹಾಮಠ ನಿರ್ವಹಣಾ ಸಮಿತಿಯ ಅಧ್ಯಕ್ಷರು: **7353675222**
2. ನಾನ್ಯಾನಾಯ್ಕ, ಅಧ್ಯಕ್ಷರು, ಗೋಶಾಲೆ, ಕಮಿಟಿ.
3. ನರಸಿಂಗ್‌ನಾಯ್ಕ, ಅಧ್ಯಕ್ಷರು, ದಾಸೋಹ, ಕಮಿಟಿ.
3. ಶ್ರೀ ಕೆ.ಟಿ ನಾಗರಾಜ ಖಜಾಂಚಿ ಮಹಾಮಠ ಸಮಿತಿ : **9945707563**
4. ಶ್ರೀಮತಿ ಜಿ.ಎಂ ಸವಿತಾಬಾಯಿ ಜಂಟಿ ಕಾರ್ಯದರ್ಶಿಗಳು: **9481663223**
5. ಶ್ರೀ ಎಂ. ಭೋಜ್ಯಾನಾಯ್ಕ ನಿರ್ದೇಶಕರು (ಮಾಚಗೊಂಡನಹಳ್ಳಿ) : **9986904586**
6. ಶ್ರೀ ರಮೇಶ್ ಪಿ. ನಿರ್ದೇಶಕರು: **8618605621**
8. ಶ್ರೀ ಸೋಮ್ಲಾನಾಯ್ಕ: ಅಧ್ಯಕ್ಷರು ಕಟ್ಟಡಗಳ ಉಪ ಸಮಿತಿ: **7892690224**
9. ಶ್ರೀ ಜಿ.ಬಿ ಮಾರುತಿನಾಯ್ಕ: ಅಧ್ಯಕ್ಷರು ಬಂಜಾರರ ಸಬಲೀಕರಣ ಉಪ ಸಮಿತಿ: **9663634805**
10. ಶ್ರೀ ಮಂಜುನಾಥ ಎಸ್ ಅಧ್ಯಕ್ಷರು ಮೂಲ ಸೌಕರ್ಯ ಉಪ ಸಮಿತಿ: **9591028806**
11. ಶ್ರೀ ಭೋಜ್ಯಾನಾಯ್ಕ ನಾರಾಯಣಪುರ ಸದಸ್ಯರು: **9980316104**

ಸಹಿ/- **(ನರೇನಹಳ್ಳಿ ಅರುಣ್ ಕುಮಾರ್ )** ಪ್ರಧಾನ ಕಾರ್ಯದರ್ಶಿಗಳು
ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ (ರಿ)
ಭಾಯಾಗಡ್, ಸೂರಗೊಂಡನಕೊಪ್ಪ, ನ್ಯಾಮತಿ ತಾಲ್ಲೂಕು.


**ಮನೆ, ಸೈಟ್ ಕೊಳ್ಳುವುದಕ್ಕೆ, ಮಾರಾಟಕ್ಕೆ**
ನನ್ನದು ಕೇವಲ 1/2 % (ಅರ್ಧ) ಪರ್ಸೆಂಟ್ ಕಮೀಷನ್ 60 ವರ್ಷದೊಳಗಿನವರಿಗೆ. 60-75 ವರ್ಷದವರಿಗೆ ಅರ್ಧಕ್ಕಿಂತ ಕಡಿಮೆ. 75 ವರ್ಷದ ಮೇಲೆ ಮಾಲೀಕರಿಗೆ (FREE) ಯಾವುದೇ ಕಮಿಷನ್ ಇಲ್ಲ.. ಕಂಡೀಶನ್ ಅಪ್ಲೈ *
**ಕಿರಣ್ ಬೂಸ್ನೂರ್** (ಏಜೆಂಟ್ )
**94824-63409**

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ 30x50 North, ಕೃಷಿ ಕೇಂದ್ರ ಹಿಂಭಾಗ 30x70 North, 30x40 North, 30x33 South, 30x54 North.
**ಐನಳ್ಳಿ ಚನ್ನಬಸಪ್ಪ ಏಜೆಂಟ್**
**99166 12110**

**WANTED**
Staff for Garment Wholesale Shop 10 Members
Receptionist (girls)2 members
Boys n girls / Salary 12k/15k
**KUMAR CREATION**
Kaipet, Davangere
**94485 89596**

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x80 East, 40x60 North, 40 ಅಡಿ ರೋಡಿಗಿದೆ, 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ.
**ಐನಳ್ಳಿ ಚನ್ನಬಸಪ್ಪ ಏಜೆಂಟ್**
**99166 12110**

**ಬಿಲ್ಡಿಂಗ್ ಮಾರಾಟಕ್ಕಿದೆ**
ಚಂದ್ರು ಗಾರ್ಡನ್ ಬಾರ್ & ರೆಸ್ಟೋರೆಂಟ್ ಬಿಲ್ಡಿಂಗ್ ಮಾರಾಟಕ್ಕಿದೆ.
ಬೈಪಾಸ್ ರೋಡ್, ದಾವಣಗೆರೆ.
**94483 38709, 94492 02189**

**ವಾಟರ್ ಲೀಕೇಜ್**
**(ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**95387 77582**
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಡ್ರೈವರ್ ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ.
**8105699985, 8971504492**

**WANTED**
Staff for Garment Wholesale Shop 10 Members
Receptionist (girls)2 members
Boys n girls / Salary 12k/15k
**VISHAL IMPEX**
615, kaipet, Davangere
**90366 57673**

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
**99868 02097**

**ಸೈಟು ಮಾರಾಟಕ್ಕಿದೆ**
30x35 ಉತ್ತರ ಹೊಸ ಸರ್.ಎಂ.ವಿ. ಕಾಲೇಜು ಹಿಂಭಾಗ @ 2699
**77600 70828**

**ಕೆಲಸಕ್ಕೆ ಬೇಕಾಗಿದ್ದಾರೆ**
ವಯೋವೃದ್ಧ ಪೇಷೆಂಟ್‌ಗಳನ್ನು ನೋಡಿಕೊಳ್ಳಲು ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ :
**63638 85792**
**63647 29758**

**ಹೋಟೆಲ್‌ಗೆ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ತಿಂಡಿ ಮತ್ತು ಅಡುಗೆ ಕೆಲಸ ಮಾಡುವ ಭಟ್ಟರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಪಾತ್ರೆ ತೊಳೆಯಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
**78293 08559**

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: **Best Lubricants**
Opp. to New Pvt Bus Stand
PB Road, Davangere.
**73380 33337**

**ಓಲ್ಡ್ ಏಜ್ ಕೇರ್ ಸೆಂಟರ್**
ಶಿಫ್ಟ್ ಲೆಕ್ಕದಲ್ಲಿ ಕೆಲಸ ಮಾಡಲು ಪುರುಷ / ಮಹಿಳಾ ಕೆಲಸಗಾರರು ಬೇಕಾಗಿದ್ದಾರೆ.
**89711 92936**

**WANTED**
Fabcurves Europeon based Company, Davangere.
**For Marketing Executive (Male) Mandatory - Bike**
Qualification : Any Degree/ITI/Diploma
**93809 24421**
Salary : As Per Company Standard

**ಸೈಟು ಮಾರಾಟಕ್ಕೆ**
ಬಸವೇಶ್ವರ ಬಡಾವಣೆ 40x70 ದಕ್ಷಿಣ ನೇರ ಮಾಲೀಕರಿಂದ
**ತಿಪ್ಪೇಶಿ ಏಜೆಂಟ್**
**99023 71609**

**ರೂಂ ಬಾಡಿಗೆಗಿದೆ**
ಕೆ.ಬಿ. ಬಡಾವಣೆ, ದೀಕ್ಷಿತ್ ರಸ್ತೆ, ಹಳೇ ಜನತಾವಾಣಿ ಕಛೇರಿ ಎದುರು, ಅಟ್ಯಾಚ್ ಬಾತ್ ರೂಂ ಇರುವ ರೂಂ ಬಾಡಿಗೆಗೆ ಇದೆ.
**74111 23555**

**ಹೊಸ ಮನೆ ಲೀಸ್‌ಗೆ ಇದೆ**
ಸಂಗಮೇಶ್ವರ ಬಡಾವಣೆ ಪಶ್ಚಿಮ ಸೈಟ್, ಪಶ್ಚಿಮಕ್ಕೆ ಬಾಗಿಲು
**ತಿಪ್ಪೇಶಿ ಏಜೆಂಟ್**
**99023 71609**

**ಬೇಕಾಗಿದ್ದಾರೆ**
UPS ಕಂಪನಿಯಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ.
Qual : PUC, Any Degree, Computer Knowledge, Tally.
**ರಚನಾ ಪವರ್ ಕಂ.** ದಾವಣಗೆರೆ.
**94498 35217**
ಭೇಟಿಯ ಸಮಯ : ಬೆಳಿಗ್ಗೆ 12 ಗಂಟೆಯಿಂದ

**ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
**90082 28222, 99001 42052**

**ಸೈಟುಗಳು ಮಾರಾಟಕ್ಕಿವೆ**
ಪುಟಗನಾಳ ಗ್ರಾಮದಲ್ಲಿ ಪಂಚಾಯಿತಿ ಡೋರ್ ನಂ. ಫೈನಲ್ ಅಪ್ರೂವಲ್ ಮತ್ತು ದೂಡಾ ಅಪ್ರೂವಲ್, ಹೊಸ ಔಟರ್ ರಿಂಗ್ ರೋಡ್ ಇಂದ ಕೇವಲ 1.5 ಕಿ.ಮೀ. ದೂರದಲ್ಲಿರುವ ಸೈಟ್‌ಗಳು ಮಾರಾಟಕ್ಕಿವೆ. 1 ಅಡಿಗೆ 1100 ರೂ.ಗಳು ಮಾತ್ರ.
**86183 43463, 86187 28546**

**ಕಾಡು ಬೆಳೆಸಿ ನಾಡು ಉಳಿಸಿ**

**ಗೋಡೌನ್ ಬಾಡಿಗೆಗೆ**
ವಿಆರ್‌ಎಲ್ ಟ್ರಾನ್ಸ್‌ಪೋರ್ಟ್, ಬಂಬೂಬಜಾರ್ ರಸ್ತೆಗೆ ಹತ್ತಿರ ಇರುವ ಚಿಕ್ಕದಾಗಿ ಫ್ಯಾಕ್ಟರಿ ಮಾಡಲು / ಗೋಡೌನ್‌ಗೆ ಯೋಗ್ಯವಾದ 2800 ಚದುರ ಅಡಿಯ ಗೋಡೌನ್ ಬಾಡಿಗೆಗೆ ಇದೆ. ವಿದ್ಯುತ್ ಮತ್ತು ನೀರಿನ ಸೌಕರ್ಯವಿದೆ.
**98809 78152**

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಸಿಟಿ ಬಾಲಾಜಿ ನಗರದಲ್ಲಿ 30x50 ಅಳತೆಯ ಪಶ್ಚಿಮ ದಿಕ್ಕಿನ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:
**74067 40635**

**WANTED**
Accountant - 2 Post
(Experience - 4-5 Years)
Contact :
**98441 20003**
**Shamanur Sugars Ltd.,**
374, 4th Main, P.J. Extn., Davangere.

**2 ಬಿಹೆಚ್‌ಕೆ ಮನೆ ಬಾಡಿಗೆಗೆ ಇದೆ**
2ನೇ ಮೇನ್, 4ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
**94818 40268**
**82964 69527**

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ 7 ಗುಂಟೆ ಇರುವ ಅಡಿಕೆ ತೋಟ ಮಾರಾಟಕ್ಕಿದೆ. ಜಗಳೂರು ರೋಡ್, ದಾವಣಗೆರೆಯಿಂದ 10 ಕಿ.ಮೀ ಹತ್ತಿರದಲ್ಲಿದೆ.
**74838 15482**

**TUITIONS**
CBSE / ICSE Boards
Class 8th, 9th, 10th
**CRASH COURSES FOR**
NEET / CET / IIT - JEE
PUC I / PUC II / PCMB
*NEET Long Term / Supplementary Exams*
**97398 65711, 94822 44114**

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
**96860 22969**


**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆ ಬಾಡಿಗೆಗೆ**
ಪಿ.ಜೆ. ಬಡಾವಣೆ, 8ನೇ ಮೇನ್ ರೋಡ್, 8ನೇ ಕ್ರಾಸ್, # 397ರ ಮೊದಲನೇ ಮಹಡಿಯಲ್ಲಿರುವ 20x40 ಅಳತೆಯ 2 ಬೆಡ್ ರೂಮ್, ಹಾಲ್, ಕಿಚನ್ ಹಾಗೂ ನೀರಿನ ಸಂಪೂರ್ಣ ಸೌಕರ್ಯವುಳ್ಳ ಮನೆ ಬಾಡಿಗೆಗೆ ಇದೆ. ವಿಚಾರಿಸಿ : ಸಸ್ಯಹಾರಿಗಳಿಗೆ ಮಾತ್ರ
**94482 48242, 78927 53714**

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ ಮತ್ತು ಅಲ್ಯುಮೀನಿಯಂ ಫ್ರೇಮ್ stainless steel ಸೊಳ್ಳೆ ಮೆಶ್ ಹಾಕಲಾಗುವುದು.
**Swapna cushion work**
Maharaj pet DVG
**98445- 81966**


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


## ಜನ್ಮದಿನದ ಶುಭಾಶಯಗಳು



ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಯುವ ಉದ್ಯಮಿಗಳೂ, ನಮ್ಮ ಪ್ರೀತಿಯ
**ಶ್ರೀ ವಿ. ಸಿದ್ದೇಶ್**
(ವಿನಾಯಕ ರೈಸ್ ಮಿಲ್)
ಅವರಿಗೆ
ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು
**ಶ್ರೀಯುತ ಜಿ.ಬಿ. ಉಮೇಶ್ ಮತ್ತು ಸಹೋದರರು**
ಶ್ರೀ ಸಿದ್ದಲಿಂಗೇಶ್ವರ ಟ್ರೇಡರ್ಸ್ ಮತ್ತು
**ಜಿ.ಎಸ್. ವೀರಣ್ಣ, ಶ್ರೀ ಗುರು ಬಸವ ಟ್ರೇಡರ್ಸ್,**
**ಜಿ.ಎಸ್. ಶಂಭು, ಸಂತೋಷ್ ಮಾಗನೂರು, ತರುಣ್ ಕುಮಾರ್**
**ಹಾಗೂ ಬಂಧು-ಮಿತ್ರರು.**
ಆರ್.ಎಂ.ಸಿ. ರೋಡ್, ನ್ಯೂ ಬಂಬೂ ಬಜಾರ್ ದಾವಣಗೆರೆ.



## 37 ನೇ ಜನ್ಮದಿನದ ಶುಭಾಶಯಗಳು




ವಿನಾಯಕ ರೈಸ್ ಮಿಲ್
ಮಾಲೀಕರಾದ
**ಶ್ರೀ ವಿ. ಸಿದ್ದೇಶ್**
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು.

✦ ಶ್ರೀಮತಿ ಮಂಜುಳಾ ಶ್ರೀ ಸತೀಶ್ ಟಿ.ಬಿ.
✦ ಶ್ರೀಮತಿ ಅಶ್ವಿನಿ ಶ್ರೀ ಪ್ರಶಾಂತ್ ಎನ್.ಸಿ. ✦ ಶ್ರೀಮತಿ ಅನುಷಾ ಸಿದ್ದೇಶ್
✦ ಶ್ರೀಮತಿ ನೇತ್ರಾವತಿ ಶ್ರೀ ವಿನಯ್‌ಕುಮಾರ್ ಎ.ಎಸ್.
✦ ಲಿಖಿತಾ ✦ ದಿಶಾ ✦ ಅಖಿಲ್ ✦ ಹರ್ಷಿತ ✦ ಉಷಾ
✦ ಪ್ರಣವ್ ✦ ಮನ್ವಿತ್ ✦ ಅನ್ವಿತಾ

**ಜಿ.ವಿ. ಪಿಯು ಕಾಲೇಜು, ದಾವಣಗೆರೆ**
**ಡಾ|| ಸಿ.ವಿ. ರಾಮನ್ ಕಾಲೇಜ್ ಸಿಬ್ಬಂದಿ ವರ್ಗ, ದಾವಣಗೆರೆ.**

# ರಾಜ್ಯಕ್ಕಾಗುವ ಅನ್ಯಾಯ ತಪ್ಪಿಸಿ : ಕೇಂದ್ರಕ್ಕೆ ಮುಖ್ಯಮಂತ್ರಿ ಪತ್ರ

ಬೆಂಗಳೂರು,ಜ.31- ಕರ್ನಾಟಕ ರಾಜ್ಯಕ್ಕೆ ಆಗುತ್ತಿರುವ ಸರಣಿ ಅನ್ಯಾಯಗಳನ್ನು 2025-26ನೇ ಸಾಲಿನ ಮುಂಗಡ ಪತ್ರದಲ್ಲಾದರೂ ಸರಿಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ಸುದೀರ್ಘ ಪತ್ರ ಬರೆದಿರುವ ಅವರು, ಮುಂಗಡ ಪತ್ರದಲ್ಲಿ ರಾಜ್ಯಕ್ಕೆ ಕೆಲವು ಕಾರ್ಯಕ್ರಮಗಳು ಮತ್ತು ಅನುದಾನ ನೀಡುವಂತೆ ಕೋರಿದ್ದಾರೆ.

ಕರ್ನಾಟಕವೂ ಸೇರಿದಂತೆ ಅಭಿವೃದ್ಧಿ ಪಥದಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳ ಆದ್ಯತೆಗಳನ್ನು ಗುರುತಿಸಿ ಸಂಪನ್ಮೂಲ ಹಂಚಿಕೆ ವಿಚಾರದಲ್ಲಿ ಅವುಗಳಿಗೆ ಹೆಚ್ಚಿನ ಶಕ್ತಿ ತುಂಬಬೇಕು ಮತ್ತು ಅವುಗಳ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದಿದ್ದಾರೆ.

ಇದರಿಂದ ದೇಶಕ್ಕೆ ಹೆಚ್ಚು ಲಾಭವಿದ್ದು, ಈ ರಾಜ್ಯಗಳ ಸಾಧನೆಯ ಪಾಲು ಇತರೆ ರಾಜ್ಯಗಳಿಗೂ ಸಹಜವಾಗಿಯೇ ಸಲ್ಲುತ್ತದೆ. ಕೇಂದ್ರ ಸರ್ಕಾರ ಕರ್ನಾಟಕದ ಬಗ್ಗೆ ಅನುಸರಿಸುತ್ತಿರುವ ತಾರತಮ್ಯ ಧೋರಣೆ ಜಗಜ್ಜಾಹೀರಾಗಿದೆ, ನಮ್ಮ ಒಕ್ಕೂಟ ವ್ಯವಸ್ಥೆ ಬಲಿಷ್ಠವಾಗಿರಬೇಕಾದರೆ, ಕೇಂದ್ರ ತಾರತಮ್ಯರಹಿತ, ನ್ಯಾಯಸಮ್ಮತ, ಪಾರದರ್ಶಕ ನೀತಿ ತನ್ನದಾಗಿಸಿಕೊಳ್ಳಬೇಕು.

## 2025-26ನೇ ಸಾಲಿನ ಬಜೆಟ್‌ನಲ್ಲಾದರೂ ಸರಿಪಡಿಸಲು ಹಣಕಾಸು ಸಚಿವರಿಗೆ ಸಿಎಂ ಮನವಿ



ರಾಜ್ಯಗಳನ್ನು ಸಂಪನ್ಮೂಲ ಸಂಗ್ರಹಣೆ ಮಾಡುವ ಘಟಕಗಳೆಂದು ನೋಡದೆ, ಅವುಗಳ ಕಷ್ಟ-ಸುಖಗಳಿಗೆ ಮಾನವೀಯವಾಗಿ ಸ್ಪಂದಿಸಬೇಕು ಎಂದಿದ್ದಾರೆ.

ಕೇಂದ್ರ ಹಣಕಾಸು ಆಯೋಗ ಶಿಫಾರಸು ಮಾಡಿದ್ದಕ್ಕಿಂತ ಕಡಿಮೆ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ನೀಡುತ್ತಾ ಬಂದಿದೆ, 2025-26ರ ಅವಧಿಯಲ್ಲಿ ಆಯೋಗ ಶಿಫಾರಸ್ಸು ಮಾಡಿರುವ ವಿಶೇಷ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಬೇಕು.

ಕೇಂದ್ರ ಸರ್ಕಾರ ರಾಜ್ಯಗಳಲ್ಲಿ ವಸೂಲು ಮಾಡುತ್ತಿರುವ ಸೆಸ್ ಮತ್ತು ಸರ್ಚಾರ್ಜ್‌ಗಳಲ್ಲಿ ರಾಜ್ಯಗಳಿಗೆ ಪಾಲು ನೀಡಲಾಗುತ್ತಿಲ್ಲ, ತಕ್ಷಣದಿಂದಲೇ ಸೆಸ್ ಮತ್ತು ಸರ್ಚಾರ್ಜ್ ರದ್ದುಗೊಳಿಸಬೇಕು, ಇಲ್ಲವೇ ಅದನ್ನು ಒಟ್ಟು ತೆರಿಗೆಯ ನಿಧಿಗೆ ಸೇರಿಸಿ ರಾಜ್ಯಗಳಿಗೆ ಹಂಚಿಕೆ ಮಾಡಬೇಕು.

ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಎಸ್‌ಜಿಎಸ್‌ಟಿ) ಸಂಗ್ರಹಕ್ಕೆ ರಾಜ್ಯ ಸರ್ಕಾರಕ್ಕೆ ಅವಕಾಶ ನೀಡಬೇಕು.

1985ರಿಂದ ಸೇವಾ ತೆರಿಗೆ ಪರಿಷ್ಕರಣೆ ಆಗಿಲ್ಲ, ಈ ದೀರ್ಘಾವಧಿಯಲ್ಲಿ ನಡೆದಿರುವ ಆರ್ಥಿಕ ಬೆಳವಣಿಗೆ ಗಮನದಲ್ಲಿಟ್ಟುಕೊಂಡು ಸೇವಾ ತೆರಿಗೆಯ ಗರಿಷ್ಠ ಮಿತಿ ಹೆಚ್ಚಿಸಲು ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕು.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಕೇಂದ್ರ ಸರ್ಕಾರ 1.14 ಕೋಟಿ ಕುಟುಂಬಗಳನ್ನು ಫಲಾನುಭವಿಗಳೆಂದು ಗುರುತಿಸಿದೆ, ಈ ನಿಯಮಾವಳಿ ಬದಲಾಯಿಸಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಫಲಾನುಭವಿಗಳೆಲ್ಲರಿಗೂ ಆರೋಗ್ಯ ಯೋಜನೆ ವಿಸ್ತರಿಸಬೇಕು.

ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರದ ನಿಯಮಾವಳಿಗೆ ಅನುಗುಣವಾಗಿ ಕರ್ನಾಟಕ ಸರ್ಕಾರ ರೈತರಿಂದ ಕೃಷಿ ಉತ್ಪನ್ನಗಳ ಖರೀದಿ ಮಾಡುತ್ತಿದೆ, ಈ ಯೋಜನೆಗೆ ಸಂಬಂಧಿಸಿದಂತೆ ರಾಜ್ಯಕ್ಕೆ ಕೇಂದ್ರ ಸರ್ಕಾರ ನೀಡಬೇಕಿರುವ 2,461.49 ಕೋಟಿ ರೂ. ಬಾಕಿ ಶೀಘ್ರವೇ ಬಿಡುಗಡೆ ಮಾಡಬೇಕು.

## ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಘೋಷಣೆಗೆ ಆಗ್ರಹ

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂಬುದಾಗಿ ಘೋಷಿಸಿದರೆ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ದಾವಣಗೆರೆಯ ಬರಪೀಡಿತ ಪ್ರದೇಶಗಳಿಗೆ ವರದಾನವಾಗಲಿದೆ, ಘೋಷಣೆ ಪ್ರಸ್ತಾವಕ್ಕೆ ಸಾರ್ವಜನಿಕ ಹೂಡಿಕೆ ಸಮಿತಿ ಅಂಗೀಕಾರ ನೀಡಿದ್ದು, ಇದೇ ಬಜೆಟ್‌ನಲ್ಲಿ ಪ್ರಕಟಣೆ ಮಾಡಬೇಕು ಎಂದು ಮುಖ್ಯಮಂತ್ರಿಗಳು ಒತ್ತಾಯಿಸಿದ್ದಾರೆ.

ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಗೌರವ ಧನದಲ್ಲಿ ಕೇಂದ್ರ ಸರ್ಕಾರದ ಪಾಲನ್ನು 5000 ರೂ.ಗೆ ಮತ್ತು ಅಡುಗೆ ಕೆಲಸಗಾರರು ಮತ್ತು ಕಾರ್ಯಕರ್ತರ ಗೌರವ ಧನದಲ್ಲಿ ಕೇಂದ್ರ ಸರ್ಕಾರದ ಪಾಲನ್ನು ಕನಿಷ್ಠ 5000 ರೂ. ಹೆಚ್ಚಿಸಬೇಕು.

ಪ್ರಧಾನಮಂತ್ರಿ ಆವಾಸ್ (ನಗರ) ಯೋಜನೆಯಡಿ ಕೇಂದ್ರ ಸರ್ಕಾರ ಪ್ರತಿ ಮನೆ ನಿರ್ಮಾಣಕ್ಕೆ 1.50 ಲಕ್ಷ ರೂ. ಮತ್ತು ರಾಜ್ಯ ಸರ್ಕಾರ 1.80 ಲಕ್ಷ ರೂ. ಸಹಾಯಧನ ನೀಡುತ್ತಿದ್ದು, ಮನೆ ನಿರ್ಮಾಣ ವೆಚ್ಚ ವಿಪರೀತ ಏರಿಕೆ ಆಗಿರುವುದರಿಂದ ಕೇಂದ್ರ ಸರ್ಕಾರ ತನ್ನ ಪಾಲನ್ನು ಕನಿಷ್ಠ 5 ಲಕ್ಷ ರೂ.ಗೆ ಹೆಚ್ಚಿಸಬೇಕು.

ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆ ಮತ್ತು 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗಾಗಿಯೇ ಮೇಕೆದಾಟು ಯೋಜನೆ ರೂಪಿಸಲಾಗಿದ್ದು, ಕೇಂದ್ರ ಸರ್ಕಾರ ಶೀಘ್ರವಾಗಿ ಯೋಜನೆಗೆ ಅನುಮತಿ ನೀಡಬೇಕು. ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುತ್ತಿರುವ ಅನುದಾನದಲ್ಲಿಯೂ ಕಡಿತವಾಗಿದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆರು ತಿಂಗಳಲ್ಲಿ 61 ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಜಾರಿಗೆ ತರುತ್ತಿರುವ 23 ಇಲಾಖೆಗಳಿಗೆ ಅನುದಾನವನ್ನೇ ಬಿಡುಗಡೆ ಮಾಡಿಲ್ಲ. ಕೇಂದ್ರ ಅನುದಾನಿತ ಯೋಜನೆಗಳ ಒಟ್ಟು ಸ್ವರೂಪವನ್ನೇ ಬದಲಾಯಿಸುವ ಅಗತ್ಯವಿದೆ, ಈ ಯೋಜನೆಗಳನ್ನು ರೂಪಿಸುವಾಗ ರಾಜ್ಯಗಳ ಜೊತೆ ಸಮಾಲೋಚನೆ ನಡೆಸುವ ಅಗತ್ಯವಿದೆ ಎಂದಿದ್ದಾರೆ.

# ಸಂವಿಧಾನ-ಶರಣರ ವಿಚಾರದಲ್ಲಿ ಸಾಮ್ಯತೆ

## 'ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ'ದ ಸಮಾರೋಪದಲ್ಲಿ ಸಿಎಂ




ಸುತ್ತೂರು, ಜ.31- ಸಂವಿಧಾನ ಹಾಗೂ ಬಸವಾದಿ ಶರಣರ ವಿಚಾರಗಳಲ್ಲಿ ಸಾಮ್ಯತೆ ಇದ್ದು, ನಾವು ಮತ್ತು ಸರ್ಕಾರಗಳು ಅವುಗಳನ್ನು ಪಾಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಸುತ್ತೂರು ಮಠದಿಂದ ಶುಕ್ರವಾರ ಆಯೋಜಿಸಿದ್ದ 'ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ'ದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೂಢನಂಬಿಕೆ ಹಾಗೂ ಗೊಡ್ಡು ಸಂಪ್ರದಾಯಗಳನ್ನು ಬಿಡಬೇಕು. ಆಗ ಮಾತ್ರ ಪರಿವರ್ತನೆ ಸಾಧ್ಯ ಎಂದು ತಿಳಿಸಿದರು.

ಬಸವಣ್ಣನವರ ಆಶಯಗಳೆಲ್ಲಾ ನಮ್ಮ ಸಂವಿಧಾನದಲ್ಲಿ ಅಡಕವಾಗಿವೆ. ಇದನ್ನು ಇಡೀ ಸಮಾಜ ಅರಿಯಬೇಕು. ಜಾತ್ಯತೀತ ಸಮಾಜ ನಿರ್ಮಾಣ ಸಂವಿಧಾನದ ಮೂಲ ಉದ್ದೇಶ. ಬಸವಾದಿ ಶರಣರ ಆಶಯವೂ ಇದೇ ಆಗಿದೆ. ಇದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡು ಬಸವಣ್ಣನವರ ಆಶಯದಂತೆ ಜಾತಿ, ಧರ್ಮದ ಹೆಸರಿನ ಮನುಷ್ಯ ತಾರತಮ್ಯ ಹಾಗೂ ಮೌಢ್ಯಗಳನ್ನು ತೊರೆಯಬೇಕು ಎಂದು ಕರೆ ನೀಡಿದರು.

ನಮಗೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದೆಯೇ ಹೊರತು, ಆರ್ಥಿಕ ಹಾಗೂ ಸಾಮಾಜಿಕವಾಗಿ ಸ್ವಾತಂತ್ರ್ಯ ದೊರೆತಿಲ್ಲ. ಇದು ಸಿಗದ ಹೊರತು ಸ್ವಾತಂತ್ರ್ಯದ ಆಶಯ ಪೂರ್ಣಗೊಳ್ಳುವುದಿಲ್ಲ ಎಂಬ ಮಾತನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಜಾರಿ ಸಭೆಯಲ್ಲೇ ಹೇಳಿದ್ದರು. ಅವರ ಮಾತು ಇಂದಿಗೂ ಸತ್ಯ. ಈಗಲೂ ನಾವು ಜಾತಿ ಕೇಳುವುದನ್ನು ನಿಲ್ಲಿಸಿಲ್ಲ, ಜಾತಿ-ಧರ್ಮದ ಅನಿಷ್ಟ ತಾರತಮ್ಯವನ್ನು ಇವತ್ತಿಗೂ ಕಾಣುತ್ತಿದ್ದೇವೆ ಎಂದು ವಿಷಾದ ವ್ಯಕ್ತಪಡಿಸಿದರು.

ನಾನು ವೈಯಕ್ತಿಕವಾಗಿ ಬಸವಣ್ಣನವರ ಅಪ್ಪಟ ಹಿಂಬಾಲಕ. ಅವರ ವಿಚಾರಗಳಿಂದ ಪ್ರಭಾವಿತನಾಗಿದ್ದೇನೆ. ಅದಕ್ಕಾಗಿಯೇ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಫೋಟೋ ಹಾಕುವುದನ್ನು ಕಡ್ಡಾಯಗೊಳಿಸಿದೆ ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಕನಕಗಿರಿ ಜೈನ ಮಠದ ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ, ದೇಶದಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ವ್ಯಸನಮುಕ್ತ ಸಮಾಜ ನಿರ್ಮಾಣವಾಗಬೇಕು. ಹಿಂದೆ, ಜಾತ್ರೆಗೆ ಬಂದರೆ ಪಾತ್ರೆಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಕಾಲವಿತ್ತು. ಈಗ ಸೇವೆ ಪ್ರೀತಿಯ ಭಾವನೆಗಳನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದರು.

## ವಿಐಪಿ ದರ್ಶನ ತಡೆಯುವ ಅರ್ಜಿ ವಿಚಾರಣೆಗೆ ನಕಾರ

ನವದೆಹಲಿ, ಜ. 31 - ದೇವಾಲಯಗಳಲ್ಲಿ ಹೆಚ್ಚುವರಿ ಶುಲ್ಕ ನೀಡಿ ವಿಐಪಿ ದರ್ಶನ ಪಡೆಯಲು ಇರುವ ಪದ್ಧತಿಯನ್ನು ರದ್ದುಗೊಳಿಸಬೇಕು ಎಂಬ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠ ಈ ಅರ್ಜಿಯನ್ನು ತಳ್ಳಿ ಹಾಕಿದ್ದು, ಈ ಬಗ್ಗೆ ಸಮಾಜ ಹಾಗೂ ದೇವಾಲಯಗಳ ಆಡಳಿತ ಮಂಡಳಿಗಳು ನಿರ್ಧರಿಸಬೇಕಿದೆ. ನ್ಯಾಯಾಲಯ ನಿರ್ದೇಶನ ನೀಡಲು ಸಾಧ್ಯವಾಗದು ಎಂದು ತಿಳಿಸಿತು. ದರ್ಶನಕ್ಕೆ ಯಾವುದೇ ವಿಶೇಷ ಆದ್ಯತೆ ನೀಡಬಾರದು ಎಂಬುದು ನಮ್ಮ ಅಭಿಪ್ರಾಯ ಆಗಿರಬಹುದು.ಆದರೆ ನ್ಯಾಯಾಲಯ ಈ ವಿಷಯದಲ್ಲಿ ನಿರ್ದೇಶನಗಳನ್ನು ನೀಡಲು ಸಾಧ್ಯವಾಗದು ಎಂದು ಪೀಠ ಹೇಳಿದೆ.

ಸಂವಿಧಾನದ 32ನೇ ವಿಧಿ ಬಳಸಿಕೊಂಡು ನ್ಯಾಯಾಂಗ ನಿರ್ದೇಶನ ನೀಡುವ ಪ್ರಕರಣ ಇದಲ್ಲ. ಈ ಅರ್ಜಿಯನ್ನು ನಾವು ತಳ್ಳಿ ಹಾಕುತ್ತಿದ್ದೇವೆ. ಆದರೆ ಸೂಕ್ತ ಅಧಿಕಾರಿಗಳು ಈ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಪೀಠ ಹೇಳಿದೆ.

ಅರ್ಜಿದಾರ ಪರವಾಗಿ ಹಾಜರಿದ್ದ ವಕೀಲ ಆಕಾಶ್ ವಶಿಷ್ಠ, ದೇವಾಲಯಗಳಲ್ಲಿ ವಿಐಪಿ ದರ್ಶನಕ್ಕೆ ಅವಕಾಶ ನೀಡುವುದು ಸಂವಿಧಾನದ 14 ಹಾಗೂ 21ನೇ ವಿಧಿಗಳ ಉಲ್ಲಂಘನೆಯಾಗಿದೆ. ಶುಲ್ಕ ಪಾವತಿಸಲು ಸಾಧ್ಯವಾಗದ ಭಕ್ತರನ್ನು ಪಕ್ಷಪಾತಿಗಳಾಗಿ ನಡೆಸಿಕೊಳ್ಳಲಾಗುತ್ತಿದೆ ಎಂದು ವಾದಿಸಿದ್ದರು.

ದೇವಾಲಯದಲ್ಲಿ ದರ್ಶನ ಪಡೆಯಲು ಭಕ್ತರು ಹೆಚ್ಚುವರಿ ಶುಲ್ಕ ಪಾವತಿಸಬೇಕಾದ ಹಲವಾರು ಉದಾಹರಣೆಗಳಿವೆ ಎಂದವರು ಹೇಳಿದ್ದರು.

ಹೆಚ್ಚಿನ ಶುಲ್ಕ ಪಾವತಿಸುವ ಭಕ್ತರಿಗೆ ವಿಶೇಷ ದರ್ಶನದ ಅವಕಾಶ ನೀಡಲಾಗುತ್ತದೆ. ಇದರಿಂದ ಉಳ್ಳವರು ಹಾಗೂ ಇತರರ ನಡುವೆ ಭೇದ ಮಾಡಿದಂತಾಗುತ್ತದೆ. ವಿಶೇಷವಾಗಿ ಮಹಿಳೆಯರು, ದಿವ್ಯಾಂಗರು ಹಾಗೂ ಹಿರಿಯ ನಾಗರಿಕರು ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಈ ಬಗ್ಗೆ ಕೇಂದ್ರ ಗೃಹ ಸಚಿವಾಲಯಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ ಆಂಧ್ರಪ್ರದೇಶಕ್ಕೆ ಮಾತ್ರ ನಿರ್ದೇಶನ ನೀಡಲಾಗಿದೆ. ಉಳಿದ ರಾಜ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಅರ್ಜಿದಾರರಾದ ವಿಜಯ್ ಕಿಶೋರ್ ಗೋಸ್ವಾಮಿ ನ್ಯಾಯಾಲಯಕ್ಕೆ ತಿಳಿಸಿದ್ದರು.

## ಹೆಲಿಕಾಪ್ಟರ್-ವಿಮಾನ ಡಿಕ್ಕಿ

**ಎರಡರಲ್ಲೂ ಇದ್ದ 67 ಜನರ ಸಾವು**

ವಾಷಿಂಗ್ಟನ್, ಜ. 31 - ಅಮೆರಿಕದ ಸೈನಿಕ ಹೆಲಿಕಾಪ್ಟರ್ ಹಾಗೂ ವಿಮಾನದ ನಡುವೆ ಡಿಕ್ಕಿ ಸಂಭವಿಸಿ ಎರಡರಲ್ಲೂ ಇದ್ದ ಎಲ್ಲಾ 67 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಮೆರಿಕನ್ ಏರ್‌ಲೈನ್ಸ್ ಪ್ರಾಂತೀಯ ವಿಮಾನಕ್ಕೆ ಹೆಲಿಕಾಪ್ಟರ್ ಅಡ್ಡವಾಗಿ ಬಂದಾಗ ಅವಘಡ ಸಂಭವಿಸಿದೆ. ಅರ್ಲಿಂಗ್‌ಟನ್‌ನ ರೊನಾಲ್ಡ್ ರೇಗನ್ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ಘಟನೆ ನಡೆದಿತ್ತು. ವಿಮಾನದಲ್ಲಿ 60 ಪ್ರಯಾಣಿಕರು ಹಾಗೂ ನಾಲ್ವರು ಸಿಬ್ಬಂದಿ ಇದ್ದರು. ಹೆಲಿಕಾಪ್ಟರ್‌ನಲ್ಲಿ ಮೂವರು ಸೈನಿಕರು ಇದ್ದರು.

## ಕುಂಭಮೇಳದಲ್ಲಿ ಇನ್ನೂ 2 ಕಾಲ್ತುಳಿತ?

ಲಕ್ನೌ, ಜ. 31 - ಮೌನಿ ಅಮಾವಾಸ್ಯೆ ದಿನದಂದು ಮಹಾಕುಂಭಮೇಳದಲ್ಲಿ ನಡೆದ ಕಾಲ್ತುಳಿತದಲ್ಲಿ 30 ಜನರು ಮೃತಪಟ್ಟಿದ್ದರು. ಇದೇ ದಿನ ಇನ್ನೂ ಎರಡು ಕಡೆ ಕಾಲ್ತುಳಿತಗಳು ನಡೆದಿದ್ದವು ಎಂದು ಕೆಲ ವರದಿಗಳು ತಿಳಿಸಿವೆ.

ಕುಂಭಮೇಳ ಪ್ರದೇಶದ ಕೆಲವೇ ಕಿಲೋಮೀಟರ್‌ಗಳ ಸುತ್ತ ಕಾಲ್ತುಳಿತಗಳು ನಡೆದಿದ್ದವು ಎನ್ನಲಾಗಿದೆ. ಝುಸಿ ಎಂಬಲ್ಲಿ ಕಾಲ್ತುಳಿತ ನಡೆದಿತ್ತು ಎಂಬ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಕಂಡುಬಂದಿವೆ.

ಈ ಬಗ್ಗೆ ಮಾತನಾಡಿರುವ ಮೇಳದ ಡಿಐಜಿ ವೈಭವ್ ಕೃಷ್ಣ, ಪೊಲೀಸರಿಗೆ ಎರಡನೇ ಕಾಲ್ತುಳಿತದ ಬಗ್ಗೆ ಮಾಹಿತಿ ಇಲ್ಲ. ಈ ಕುರಿತು ಜಾಲತಾಣಗಳಲ್ಲಿ ಕಂಡುಬಂದಿರುವ ವಿಡಿಯೋಗಳನ್ನು ಪರಿಶೀಲಿಸಲಾಗುವುದು ಎಂದಿದ್ದಾರೆ.

ಅದೇ ದಿನದಂದು ಸೆಕ್ಟರ್ 10ರ ಬಳಿ ಮೂರನೇ ಕಾಲ್ತುಳಿತ ಸಂಭವಿಸಿತ್ತು.

ಇಲ್ಲಿ ಏಳು ಜನ ಸಾವನ್ನಪ್ಪಿದ್ದರು ಎಂದು ಕೆಲ ವರದಿಗಳು ತಿಳಿಸಿವೆ. ಅಖಾಡಾದ ಮಹಾಮಂಡಲೇಶ್ವರರ ವಾಹನ ಒಂದಕ್ಕೆ ದಾರಿ ಮಾಡಿ ಕೊಡುವಾಗ ಈ ಕಾಲ್ತುಳಿತ ಸಂಭವಿಸಿತ್ತು ಎನ್ನಲಾಗಿದೆ.


**ಹುಟ್ಟುಹಬ್ಬದ ಶುಭಾಶಯಗಳು**



ದಿನಾಂಕ 1.2.2025ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ವಿನೋಬನಗರದ ಶ್ರೀ ಚೌಡೇಶ್ವರಿ ದೇವಸ್ಥಾನದ ಅಧ್ಯಕ್ಷರೂ, ನಾಯಕ ಸಮಾಜದ ಮುಖಂಡರೂ, ವಾಲ್ಮೀಕಿ ಜಾತ್ರಾ ಮಹೋತ್ಸವದ ಸಂಚಾಲಕರೂ ಆದ ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾ ಉಪಾಧ್ಯಕ್ಷರೂ ಆದ

**ಶ್ರೀ ಶ್ರೀನಿವಾಸ್ ದಾಸಕರಿಯಪ್ಪ**

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಪದಾಧಿಕಾರಿಗಳು
ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ,
ವಿನೋಬನಗರ, 1ನೇ ಮುಖ್ಯರಸ್ತೆ, ದಾವಣಗೆರೆ.

**ಜನ್ಮದಿನದ ಶುಭಾಶಯಗಳು**




ವಿನಾಯಕ ರೈಸ್ ಮಿಲ್ ಮಾಲೀಕರು, ಆತ್ಮೀಯರಾದ
**ಶ್ರೀ ವಿ. ಸಿದ್ದೇಶ್** ಅವರಿಗೆ ಜನ್ಮದಿನದ ಶುಭಾಶಯಗಳು.

✦ ಎಂ. ಬಿ.ಪ್ರಕಾಶ್ ✦ ಹೆಚ್.ಎಸ್. ಅವಣ್ಣೆಪ್ಪ,
✦ ಹೆಚ್. ಪ್ರಶಾಂತ್ ✦ ಅಮರೇಶ್ ಬಳಗನೂರು
✦ ಮೆ|| ಮಣಿಕಂಠ ಟ್ರೇಡರ್ಸ್ ✦ ವಿನಾಯಕ ಗನ್ನಿ ಡಿಪೋ.
✦ ಸಂಗಮೇಶ್ವರ ಗನ್ನಿ ಡಿಪೋ ✦ ಕಾರ್ತಿಕ್ ಟ್ರೇಡರ್ಸ್
✦ ಮೆ|| ವೀರಭದ್ರೇಶ್ವರ ಟ್ರೇಡರ್ಸ್, ತುಮಕೂರು.
✦ ಅಮರೇಶ್ವರ ಟ್ರೇಡರ್ಸ್

ಹೊಸ ಮತ್ತು ಹಳೇ ಖಾಲಿ ಚೀಲದ ವ್ಯಾಪಾರಿಗಳು
ಎಪಿಎಂಸಿ ಯಾರ್ಡ್ ಡಿ ಬ್ಲಾಕ್, ದಾವಣಗೆರೆ.

**ಹುಟ್ಟುಹಬ್ಬದ ಶುಭಾಶಯಗಳು**



ಸ್ವಾರ್ಥವಿಲ್ಲದೇ ಸಾರ್ಥಕತೆಯೆಡೆಗೆ ಸಾಗುತ್ತಿರುವ ನಮ್ಮೆಲ್ಲರ ಪ್ರೀತಿಯ ಮಿತ್ರರಾದ
**ಶ್ರೀಯುತ ವಿ. ಸಿದ್ದೇಶ್**
ವಿನಾಯಕ ರೈಸ್ ಮಿಲ್ ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

ಶಿವಶಾಂತ ಎಂಟರ್‌ಪ್ರಸಸ್- ಕಂಪ್ಲಿ
ಎ. ನಾಗರಾಜ್ ಸಣ್ಣಾಪೂರ
ಮಹಬೂಬ ಜನರಲ್ ಮರ್ಚೆಂಟ್ಸ್ - ಹರಿಹರ
ಸೈಯದ್ ಇದಾಯಿದ್
ಕೈಲಾಸ ಬಾಬು ಮಾಗಿ (ಬಾಬು)
ಕೆ.ಜಿ. ವಾಸುದೇವ್, ನಿಟುವಳ್ಳಿ

**ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು**

TEAM V.SIDDESH YOUTH ICON



ಸ್ವಾರ್ಥವಿಲ್ಲದೇ ಸಾರ್ಥಕತೆಯೆಡೆಗೆ ಸಾಗುತ್ತಿರುವ ನಮ್ಮೆಲ್ಲರ ಪ್ರೀತಿಯ
ವಿನಾಯಕ ರೈಸ್ ಮಿಲ್ ಮಾಲೀಕರಾದ
**ಶ್ರೀಯುತ ವಿ. ಸಿದ್ದೇಶ್**
ಅವರಿಗೆ ಹೃದಯ ಪೂರ್ವಕ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.



- ಕರೇಶಿವಪ್ಪರ ಮಂಜುನಾಥ್ ಕೆ.ಎಸ್.
- ಅಣ್ಣಪ್ಪ, ಎಂ.ಎನ್ ಅಂಡ್ ಸನ್ಸ್
- ಜಯಪ್ರಕಾಶ್ ಮಾಗಿ ಅಕ್ಕಿ ವರ್ತಕರು
- ಕೈಲಾಸ್ ಬಾಬು ಮಾಗಿ, ರೈಸ್ ಕಾರ್ನರ್
- ಮಾಳಗಿ ಸಿದ್ದೇಶ್ ಎಂ.ಪಿ.
- ವಿನಯ್, ಬಿಪಿಎಂ
- ಗುರುರಾಜ್ ಕೊಡೇಕಲ್
- ಸತೀಶ್, ಬಾಳೆಹೊಲದ ಟ್ರೇಡರ್ಸ್
- ಲಿಂಗರಾಜು ಕೊಡೇಕಲ್
- ಸತೀಶಣ್ಣ ಬಲ್ಲೂರು
- ಮಲ್ಲಿಕಾರ್ಜುನ A.S.E
- ಕುಮಾರಸ್ವಾಮಿ ಹಿರೇತೋಗಲೇರಿ
- ಪರಮೇಶಣ್ಣ ಆನೆಕೊಂಡ
- ಅಜಯ್, ABC ಡೆಕೋರೇಷನ್
- ಟಿ.ಜೆ. ಸಿದ್ದಲಿಂಗಪ್ಪ
- ಹರೀಶ್ ಬೆನ್ನೂರು
- ಪ್ರದೀಪ್ ಕುಮಾರ್
- ದಿಲೀಪ್ ಕುಮಾರ್
- ಅವಿನಾಶ್ ಹಂಪಳ್ಳಿ
- ವಿನಯ ಕುಮಾರ್ ಕರಮುಡಿ
- ವೀರೇಶ್, ವಿನಾಯಕ ಕಾರ್ನರ್
- ಸಂಜಯ್, ಚಾರ್ಮುನಿ
- ಅರುಣ್ ಕುಮಾರ್ ಸಿದ್ದೇಶ್ವರ ಪ್ಯಾಲೇಸ್ ಹರಿಹರ
- ಗೋಪಿಕೃಷ್ಣ ನಂದಿತಾವರೆ
- ಕಿಶೋರ್ ಕೋರಿ, ಬೆಂಗಳೂರು
- ಪ್ರಮೋದ್ ಕುಮಾರ್ ಎಂ.ಡಿ. ಡಿಸಿಸಿ ಬ್ಯಾಂಕ್, ದಾವಣಗೆರೆ.
- ನಾಗೇಂದ್ರಪ್ಪ ಹಿರೇಕೊಗಲೂರು
- ವೆಂಕಟೇಶ್ ತ್ಯಾವಣಗಿ, NBT ಟ್ರೇಡರ್ಸ್
- ಸುರೇಶಣ್ಣ, ಯರನಾಗತಿಹಳ್ಳಿ ಕ್ಯಾಂಪ್
- ರಮೇಶಣ್ಣ, ಯರನಾಗತಿಹಳ್ಳಿ ಕ್ಯಾಂಪ್
- ರುದ್ರೇಶ್, ಆವರಗೆರೆ
- ಹೊನ್ನರಾಜು ಪಿ.ಸಿ.
- ಲಿಂಗರಾಜು, ಕಂಠಿ ಬಸವೇಶ್ವರ ಎಂಟರ್‌ಪ್ರೈಸಸ್

37 HAPPY BIRTHDAY

ವಿ. ಸಿದ್ದೇಶ್ ಸ್ನೇಹ ಬಳಗ (ವಿನಾಯಕ ರೈಸ್ ಮಿಲ್) ದಾವಣಗೆರೆ.

# ನಗರದಲ್ಲಿಂದು 11ನೇ ತಾ.ಕನ್ನಡ ಸಾಹಿತ್ಯ ಸಮ್ಮೇಳನ



ವೇದಿಕೆ ಸಿದ್ಧತೆ ಪರಿಶೀಲನೆ ; ಶನಿವಾರ ನಡೆಯಲಿರುವ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸಿದ್ಧತೆಗಳನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಮತ್ತಿತರರು ಶುಕ್ರವಾರ ಸಂಜೆ ಪರಿಶೀಲಿಸಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ 11ನೇ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ತಿಳಿಸಿದರು.

ಬೆಳಿಗ್ಗೆ 8 ಗಂಟೆಗೆ ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಬೆಳಿಗ್ಗೆ 9 ಕ್ಕೆ ತಾಯಿ ಭುವನೇಶ್ವರಿ ಭಾವಚಿತ್ರ ಹಾಗೂ ಸಮ್ಮೇಳನಾಧ್ಯಕ್ಷರಾದ ಶಿವಾನಂದ ಗುರೂಜಿ ಅವರ ಮೆರವಣಿಗೆ ನಡೆಯಲಿದೆ.

ತಾ.ಪಂ. ಇಓ ರಾಮಭೋವಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಮೆರವಣಿಗೆಯಲ್ಲಿ ಬಸವ ಕಲಾ ಲೋಕದ ನಂದಿಕೋಲು, ದುರ್ಗಮ್ಮದೇವಿ ತಂಡದ ಕೋಲಾಟ, ನಾಸಿಕ್ ಡೋಲ್, ಸಹನಾ ಇಂಟರ್ ನ್ಯಾಷನಲ್ ಶಾಲೆ ಮಕ್ಕಳಿಂದ ವಿವಿಧ ವೇಷಭೂಷಣಗಳ ಪ್ರದರ್ಶನ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಳ್ಳಲಿವೆ.

ಬೆಳಿಗ್ಗೆ 10 ಗಂಟೆಗೆ ಸಮ್ಮೇಳನದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದು, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು.

ಹಿರಿಯ ಸಾಹಿತಿ ಡಾ. ಲೋಕೇಶ್ ಅಗಸನಕಟ್ಟೆ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಎಸ್ಪಿ ಉಮಾ ಪ್ರಶಾಂತ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯರಾದ ಗೀತಾ ದಿಳ್ಳೆಪ್ಪ, ವೀಣಾ ನಂಜಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 1.30 ಕ್ಕೆ ಸಾಹಿತ್ಯ ಚಿಂತನ-ಮಂಥನ ಗೋಷ್ಠಿ ನಡೆಯಲಿದ್ದು, ದಾವಣಗೆರೆ ತಾಲ್ಲೂಕಿನ ಸಾಹಿತ್ಯ ಕ್ಷೇತ್ರದ ಸಾಧಕರ ವಿಷಯ ಕುರಿತು ಸಾಹಿತಿ ಡಾ.ಎ.ಬಿ.ರಾಮಚಂದ್ರಪ್ಪ ಹಾಗೂ ಮಕ್ಕಳು, ಯುವಕರು, ಮಹಿಳೆಯರ ಮುಂದಿರುವ ಸವಾಲುಗಳ ಬಗ್ಗೆ ಡಾ. ಪಿ. ಎಂ.ಅನುರಾಧ, ಕನ್ನಡ ಕಟ್ಟುವಲ್ಲಿ ತಂತ್ರಜ್ಞಾನದ ಪಾತ್ರ ಕುರಿತು ವೆಂಕಪ್ಪನವರ ಬಸವರಾಜ ಮಾತನಾಡಲಿದ್ದಾರೆ. ಡಾ. ಶಶಿಕಲಾ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ.

ನಂತರ 2.30ಕ್ಕೆ ಕವಿಗೋಷ್ಠಿ ನಡೆಯಲಿದ್ದು, ಸಂಜೆ 4 ಗಂಟೆಗೆ ದಾವಣಗೆರೆ ತಾಲ್ಲೂಕಿನಲ್ಲಿ ಕಂಡು ಬರುವ ಪ್ರಮುಖ ಶಾಸನಗಳ ಕುರಿತು ಡಾ.ಬುರುಡೇಕಟ್ಟೆ ಮಂಜಪ್ಪ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸಂಜೆ 4.30 ಕ್ಕೆ ಬಹಿರಂಗ ಅಧಿವೇಶನ ನಡೆಯಲಿದ್ದು, ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದೆ. ಇದೇ ವೇಳೆ ಸಾಧಕರಿಗೆ ಸನ್ಮಾನ ಸಹ ನಡೆಯಲಿದೆ. ಸಂಜೆ 6.30 ಕ್ಕೆ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

### ನಗರದಲ್ಲಿ ಇಂದು 'ಬಯಲು ಕಲಾ ಪ್ರದರ್ಶನ'

ದಾವಣಗೆರೆ ಕಲಾ ಪರಿಷತ್ತು ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ ಇಂದು ಬೆಳಗ್ಗೆ 8ರಿಂದ ರಾತ್ರಿ 9ರ ವರೆಗೆ 'ಬಯಲು ಕಲಾ ಪ್ರದರ್ಶನ' ನಡೆಯಲಿದೆ.

ಕಲಾವಿದರಾದ ಎ. ಮಹಲಿಂಗಪ್ಪ, ಶಾಂತಯ್ಯ ಪರಡಿಮಠ್, ಬಿ.ಅಚ್ಚುತಾನಂದ, ಕೆ.ಎಸ್. ಶಶಿಕುಮಾರ್ ಭಾಗವಹಿಸಲಿದ್ದಾರೆ.

# ಸುಸ್ಥಿರ ಸಮಾಜ ನಿರ್ಮಾಣಕ್ಕೆ ಉತ್ತಮ ಶಾಲೆ, ಶಿಕ್ಷಣ, ಸಂಸ್ಕಾರ, ಸಂಸ್ಕೃತಿ ಪೂರಕ : ಕರ್ಜಗಿ




ಕುಂಬಳೂರು

ಮಲೇಬೆನ್ನೂರು, ಜ.31- ಸಮಾಜವನ್ನು ಸುಸ್ಥಿತಿಯಲ್ಲಿಡಬೇಕಾದರೆ ಶಾಲೆ, ಉತ್ತಮ ಶಿಕ್ಷಣ, ಸಂಸ್ಕಾರ, ಸಂಸ್ಕೃತಿ ಬಹಳ ಮುಖ್ಯ ಎಂದು ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ ಹೇಳಿದರು.

ಅವರು, ಕುಂಬಳೂರು ಗ್ರಾಮದ ಹೊರವಲಯದಲ್ಲಿರುವ ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಚಿಟ್ಟಕ್ಕಿ ಸಾಂಸ್ಕೃತಿಕ ಉತ್ಸವ- 2025 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಲ್ಯಾಣ ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಆದ ವಚನ ಕ್ರಾಂತಿ ಜಗತ್ತಿನ ಅತಿದೊಡ್ಡ ಜ್ಞಾನ ಕ್ರಾಂತಿಯಾಗಿದ್ದು, ಅಂದಿನಿಂದ ಇಂದಿನವರೆಗೂ ಶಿಕ್ಷಣ, ವಿಜ್ಞಾನದಲ್ಲಿ ಭಾರತ ಜಗತ್ತಿಗೆ ಕೊಟ್ಟ ಕೊಡುಗೆ ಬಹಳ ದೊಡ್ಡದು ಎಂದು ಹೇಳಲು ಭಾರತೀಯರಾದ ನಾವು ಹೆಮ್ಮೆಪಡುತ್ತೇವೆ.

ಜ್ಞಾನವನ್ನು ಹುಡುಕಿಕೊಂಡು ಹೋಗುವ ನಾವು ಹೊಸತನವನ್ನು ಕಲಿತು, ಅದನ್ನು ಜಗತ್ತಿಗೆ ಪರಿಚಯಸುತ್ತಾ ಬಂದಿದ್ದೇವೆ. ಇಂತಹ ವಾತಾವರಣದಲ್ಲಿ ಹುಟ್ಟಿದ ಚಿಟ್ಟಕ್ಕಿ ಶಾಲೆ 2 ವರ್ಷಗಳಲ್ಲೇ ಗಮನ ಸೆಳೆಯುವಂತಹ ಸಾಧನೆ ಮಾಡಿದ್ದು, ಸರಿಯಾದ ದಾರಿಯಲ್ಲಿ ಸಾಗುತ್ತಿದೆ ಎಂದು ಗುರುರಾಜ ಕರ್ಜಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪೋಷಕರು ಮಕ್ಕಳ ಅಂಕಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ಮಕ್ಕಳ ನಡೆ-ನುಡಿಯಲ್ಲಿ ಬದಲಾವಣೆಯನ್ನು ಗಮನಿಸಬೇಕು. ಶಿಕ್ಷಕರು ವಿದ್ಯಾರ್ಥಿ ಗಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಮೌಲ್ಯಗಳನ್ನು ಕಲಿಸಬೇಕು. ಮಕ್ಕಳನ್ನು ಬರೀ ಕಲಿಕೆಗೆ ಸೀಮಿತಗೊಳಿಸದೇ ಆಟ, ಮನರಂಜನೆ, ಸಂಗೀತ, ಪ್ರವಾಸಗಳ ಜೊತೆಗೆ ಪ್ರೀತಿ, ಗೌರವವನ್ನೂ ಪರಿಚಯಿಸ ಬೇಕೆಂದು ಕರ್ಜಗಿ ಪೋಷಕರಿಗೆ ಹೇಳಿದರು.

ಬೆಂಗಳೂರಿನ ಸೃಜನಾಶೀಲ ತರಬೇತಿ ಅಕಾಡೆಮಿಯ ವೈ.ಜಿ.ಪಾಟೀಲ್ ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ವಿಶೇಷ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸುವ ಕೆಲಸವನ್ನು ಶಿಕ್ಷಕರು ಮಾಡಬೇಕೆಂದರು.

ಚಿಟ್ಟಕ್ಕಿ ಶಾಲೆಯ ಆಡಳಿತಾಧಿಕಾರಿ ಎಸ್.ಕೆ. ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹೈದರಾಬಾದ್ ಉದ್ಯಮಿ ಸುಧೀರ್ ರಮಣಿ, ಎಸ್‌ಡಿವಿಎಲ್ ವಿದ್ಯಾಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಸುಧಾ ರಮೇಶ್, ಕಾರ್ಯದರ್ಶಿ ಮಹಾಂತೇಶ್ ಸ್ವಾಮಿ, ಶಾಲೆ ಪ್ರಿನ್ಸಿಪಾಲ್ ಅಖಿಲೇಶ್ವರಿ ವೇದಿಕೆಯಲ್ಲಿದ್ದರು.

ಎಸ್‌ಡಿವಿಎಲ್ ವಿದ್ಯಾಸಂಸ್ಥೆ ಅಧ್ಯಕ್ಷ ಹಾಗೂ ಉದ್ಯಮಿ ಚಿಟ್ಟಕ್ಕಿ ರಮೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಅಭಿಷೇಕ್ ಸ್ವಾಗತಿಸಿದರು. ಶಿಕ್ಷಕ ವೀರಭದ್ರಾಚಾರ್ ವಂದಿಸಿದರು.

# ನಗರದಲ್ಲಿ ನಾಡಿದ್ದು ಶ್ರೀ ಅನ್ನಪೂರ್ಣೇಶ್ವರಿ ರಥೋತ್ಸವ



### ನಾಳೆ ಶ್ರೀ ಸೀತಾರಾಂ ಕಲ್ಯಾಣೋತ್ಸವ

ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ದಲ್ಲಿ ಶ್ರೀ ದೇವಿಯ ರಥೋತ್ಸವ ಕಾರ್ಯಕ್ರಮ ಗಳು ಇಂದಿನಿಂದ ನಾಲ್ಕು ದಿನ ನಡೆಯ ಲಿವೆ ಎಂದು ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಆರ್. ಜಿ.ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 6 ಕ್ಕೆ ಶ್ರೀ ದೇವಿಗೆ ಪುಷ್ಪಾರ್ಚನೆ, ಕುಂಕುಮಾರ್ಪಣೆ, ಪಾರಾಯಣ, ನವಗ್ರಹ ಶಾಂತಿ ಹೋಮ, ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 5 ಗಂಟೆಗೆ ತುಳಸಿ ಅರ್ಚನೆ, ಭಜನೆ, ಸಾಂಸ್ಕೃತಿಕ ಕಾರ್ಯ ಕ್ರಮ, ಸಂಜೆ 7ಕ್ಕೆ ತಪಸ್ಯ ವಾಸವಿ ನೃತ್ಯಾಲಯ ಮಕ್ಕಳಿಂದ ನೃತ್ಯ ಪ್ರದರ್ಶನ ಜರುಗಲಿದೆ.

ನಾಳೆ ಭಾನುವಾರ ಬೆಳಿಗ್ಗೆ 6 ಕ್ಕೆ ನವಚಂಡಿಕಾ ಯಾಗ, ಸಂಜೆ 6ಕ್ಕೆ ಶ್ರೀ ಸೀತಾರಾಮ ಕಲ್ಯಾಣೋತ್ಸವ ಏರ್ಪಾಡಾಗಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷರೂ ಆಗಿರುವ ಹಿರಿಯ ನ್ಯಾಯವಾದಿ ಪ್ರಕಾಶ್ ಪಾಟೀಲ್ ಹೇಳಿದರು.

ದಿನಾಂಕ 3ರ ಸೋಮವಾರ ಬೆಳಿಗ್ಗೆ ಸುದರ್ಶನ ಹೋಮ, ರುದ್ರ ಹೋಮ, ಸಂಜೆ 6.30ಕ್ಕೆ ಶ್ರೀ ವಾಸವಿ ಗಾನಾಮೃತ ತಂಡದಿಂದ ನೃತ್ಯ ಮತ್ತ ಸಂಗೀತ ಸೇವೆ ನಡೆಯಲಿದೆ.

ಫೆಬ್ರವರಿ 4ರ ಮಂಗಳವಾರ 8ಕ್ಕೆ ಅಭಿಷೇಕ, ಮಧ್ಯಾಹ್ನ 12.05ಕ್ಕೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ, ಸಂಜೆ 5ಕ್ಕೆ ಶ್ರೀ ವಾಸವಿ ಯುವತಿಯರ ಭಜನಾ ಮಂಡಳಿ ಯಿಂದ ಭಜನೆ ಜರುಗಲಿದೆ. ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಪಾಲಿಕೆ ಮಹಾಪೌರರಾದ ಕೆ. ಚಮನ್ ಸಾಬ್, ಪಾಲಿಕೆ 15ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅವರುಗಳು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

# ಕುರುವ : ನೂತನ ಮೂರ್ತಿಗಳ ಪ್ರತಿಷ್ಠಾಪನೆ



ನ್ಯಾಮತಿ ತಾಲ್ಲೂಕಿನ ಕುರುವ ಗ್ರಾಮದಲ್ಲಿ ನೂತನ ಆಂಜನೇಯ ಸ್ವಾಮಿ, ಬಸವೇಶ್ವರ ಸ್ವಾಮಿಗಳ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯ ಕ್ರಮಗಳು ಇಂದು ಮತ್ತು ನಾಳೆ ನಡೆಯಲಿವೆ. ಇಂದು ಸಂಜೆ 6 ಕ್ಕೆ ದೇವರುಗಳ ಮೆರವಣಿಗೆ ಜರುಗಲಿದೆ. ನಾಳೆ ಬ್ರಾಹ್ಮೀ ಮೂಹೂರ್ತದಲ್ಲಿ ಕಳಸಾರೋಹಣ, ಮಹಾಮಂಗಳಾರತಿ ನಡೆಯಲಿದೆ. ನಂತರ ಮಧ್ಯಾಹ್ನ 12 ಗಂಟೆಗೆ ನಡೆಯಲಿರುವ ಧರ್ಮ ಸಭೆಯ ನೇತೃತ್ವವನ್ನು ಹಿರೇಕಲ್ಮಠದ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ರಾಂಪುರ ಹಾಲಸ್ವಾಮಿಮಠದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಮತ್ತು ಗೋವಿನ ಕೋವಿ ಹಾಲಸ್ವಾಮೀಜಿ ಮಠದ ಪೀಠಾಧ್ಯಕ್ಷ ಶಿವಯೋಗಿ ಮಹಾಲಿಂಗ ಸ್ವಾಮೀಜಿ ವಹಿಸಲಿದ್ದಾರೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಉಪಸ್ಥಿತರಿರುವರು. ಸಂಜೆ 6.30ಕ್ಕೆ ರಸಮಂಜರಿ ಕಾರ್ಯಕ್ರಮ ಇರುತ್ತದೆ. ಸಾಮೂಹಿಕ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ಕುಂದುವಾಡ ರಸ್ತೆಯ ಶ್ರೀ ಗಡಿ ಚೌಡೇಶ್ವರಿ ದೇವಿಯ ದೇವಸ್ಥಾನದ ವಾರ್ಷಿಕೋತ್ಸವ

ಕುಂದುವಾಡ ರಸ್ತೆಯಲ್ಲಿರುವ ಶ್ರೀ ಗಡಿ ಚೌಡೇಶ್ವರಿ ದೇವಿ ದೇವಸ್ಥಾನ ಟ್ರಸ್ಟ್ ವತಿಯಿಂದ ಇಂದು ಶ್ರೀ ಬನ್ನಿ ಮಹಾಂಕಾಳಿ, ಶ್ರೀ ವಿನಾಯಕ, ಈಶ್ವರ, ಶ್ರೀ ಬಸವೇಶ್ವರ, ಶ್ರೀ ಗಡಿ ಚೌಡೇಶ್ವರಿ ದೇವಿಯ 20 ನೇ ಹಾಗೂ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ 16 ನೇ ವಾರ್ಷಿಕೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 5.30 ಕ್ಕೆ ಕಾಕಡಾರತಿ, ನಂತರ ಭಜನೆ, 8 ಕ್ಕೆ ಉಪ ಹಾರ, ಮೆರವಣಿಗೆ, 9 ಕ್ಕೆ ಭಜನೆ, ಮಹಾಮಂಗಳಾರತಿ, ಮಧ್ಯಾಹ್ನ 12 ರಿಂದ ಸಂತ ಸಮಾರಾಧನೆಯೊಂದಿಗೆ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗವಿರುತ್ತದೆ.

# ಸೂಪರ್ ಮ್ಯಾಕ್ಸ್ ಸ್ಮಾರ್ಟ್ ವಿದ್ಯುತ್ ಮೀಟರ್ ಉತ್ಪಾದನಾ ಘಟಕ ಉದ್ಘಾಟನೆ



ದಾವಣಗೆರೆ, ಜ.31- ದೇಶದಲ್ಲೇ ಅತ್ಯಾಧುನಿಕ ತಂತ್ರಜ್ಞಾನದ ಸ್ಮಾರ್ಟ್ ಎನರ್ಜಿ ಮೀಟರ್‌ಗಳ ಉತ್ಪಾದನಾ ಘಟಕ 'ಸೂಪರ್ ಮ್ಯಾಕ್ಸ್ ಕಾಂಪೋನೆಂಟ್ಸ್ ಪ್ರೈವೇಟ್ ಲಿಮಿಟೆಡ್' ಇದರ ಆರಂಭವನ್ನು ಆವರಗೆರೆಯ ಘಟಕದ ಆವರಣದಲ್ಲಿ ನೆರವೇರಿಸಲಾಯಿತು.

ಉದ್ಘಾಟಕರಾಗಿ ಆಗಮಿಸಬೇಕಿದ್ದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ವಯೋ ಸಹಜ ಕಾರಣಗಳಿಂದ ಸ್ವಗೃಹದಿಂದಲೇ ಶುಭ ಹಾರೈಸಿದರು.

ಲೆಕ್ಕ ಪರಿಶೋಧಕ ಡಾ. ಅಥಣಿ ವೀರಣ್ಣ ಮುಂತಾದ ಅನೇಕ ಗಣ್ಯರು ಆಗಮಿಸಿದ್ದರು.

ಅತ್ಯಾಧುನಿಕವಾದ ತಂತ್ರಜ್ಞಾನದೊಂದಿಗೆ ವಿದ್ಯುತ್ ಬಳಕೆಯ ದಾಖಲೆಯನ್ನು ನಿಖರವಾಗಿ ಒದಗಿಸುವ ಈ ಸ್ಮಾರ್ಟ್ ಎನರ್ಜಿ ಮೀಟರ್ ಭವಿಷ್ಯದ ತಲೆಮಾರಿನ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆಗೂ ಸಹಾ ಸೂಕ್ತವಾಗಿದ್ದು, ವಿದ್ಯುತ್ ಮಿತ ಬಳಕೆಗೆ ಸಹಾಯಕವಾಗುವ ಇದು ದುರ್ಬಳಕೆ ಹಾಗೂ ಅನಾವಶ್ಯಕ ಬಳಕೆಯನ್ನು ಪರೋಕ್ಷವಾಗಿ ನಿಯಂತ್ರಿಸಲಿದೆ.

ಸೂಪರ್ ಮ್ಯಾಕ್ಸ್ ಕಾಂಪೋನೆಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರುಗಳಾದ ಅಂಜೂ ಆರಾಧ್ಯ ಬಹದ್ದೂರ್, ಮಲ್ಲೋಕಾರಾಧ್ಯ, ರೂಪಾ ಆರಾಧ್ಯ, ರೋಹಿತ್ ಬಹದ್ದೂರ್, ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್ ಮತ್ತು ಇತರರು ಆಗಮಿಸಿದ್ದರು.

ಲೆಕ್ಕಪರಿಶೋಧಕ ಸಂಗಮೇಶ್ವರ ಹುರಕಡ್ಲಿ, ಆರ್ಕಿಟೆಕ್ಟ್ ಇಂಜಿನಿಯರ್ ಐ.ಪಿ. ಏಕೋ ರಾಮಾರಾಧ್ಯ, ಮಾಗನೂರು ಚಂದ್ರಶೇಖರ ಗೌಡ್ರು, ಸಾವನ್ ಅಂಬರ್‌ಕರ್ ಮುಂತಾದ ಗಣ್ಯರು ಆಗಮಿಸಿ ಶುಭ ಕೋರಿದರು.

# ಹರಿಹರದಲ್ಲಿ ಸಿಲಿಂಡರ್ ರೆಗ್ಯುಲೇಟರ್ ಸೋರಿಕೆಯಿಂದ ಬೆಂಕಿ ಅನಾಹುತ



ಹರಿಹರ, ಜ.31- ನಗರದ ಹೊರವಲಯದ ಗುತ್ತೂರು ಗ್ರಾಮದ ಲಲಿತಮ್ಮ ಬಡಾವಣೆಯ ಪ್ರಕಾಶ್ ಎಂಬುವವರ ಮನೆಯಲ್ಲಿ ಗ್ಯಾಸ್ ಸಿಲಿಂಡರ್ ರೆಗುಲೇಟರ್ ಪೈಪು ಸೋರಿಕೆಯಿಂದ ಬೆಂಕಿ ಅನಾಹತ ಸಂಭವಿಸಿದ ಘಟನೆ ನಡೆದಿದೆ. ಸಿಲಿಂಡರ್ ಬೆಂಕಿ ಅನಾಹುತ ದಿಂದಾಗಿ ಮನೆಯ ಒಳಗಡೆ ಬಾಗಿಲು ಕಿಟಕಿಗಳಿಗೆ, ಸಿಲಿಂಗ್ ಫ್ಯಾನ್, ಕೂಲರ್ ಫ್ರೀಜ್, ಸೋಲಾರ್ ಸೇರಿದಂತೆ ಗೃಹೋಪಯೋಗಿ ವಸ್ತುಗಳು ಸುಟ್ಟಿರುತ್ತವೆ. ಆದರೆ, ಯಾರಿಗೂ ಯಾವುದೇ ರೀತಿಯ ಗಾಯಗಳು ಆಗದೇ ಇರುವುದು ಕಂಡುಬಂದಿದೆ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿಗಳ ಆಗಮಿಸಿ, ಬೆಂಕಿಯನ್ನು ನಂದಿಸುವ ಮೂಲಕ ಹೆಚ್ಚಿನ ಪ್ರಮಾಣದ ಅನಾಹುತ ಆಗದಂತೆ ತಡೆದಿದ್ದಾರೆ.


# ವಿದೇಶಿ ವ್ಯಾಸಂಗ ವೇತನಕ್ಕೆ ಅರ್ಜಿ

ದಾವಣಗೆರೆ,ಜ.31- ಡಿ.ದೇವರಾಜು ಅರಸು ವಿದೇಶಿ ವ್ಯಾಸಂಗ ವೇತನಕ್ಕಾಗಿ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಫೆಬ್ರವರಿ 5 ರವರೆಗೆ ವಿಸ್ತರಿಸಲಾಗಿದೆ ಎಂದು ಬಿಸಿಎಂ ಅಧಿಕಾರಿ ಗಾಯತ್ರಿ ತಿಳಿಸಿದ್ದಾರೆ.

# ಸ್ಮಾರ್ಟ್ ಸಿಟಿ ಓಕೆ, ಕ್ಲೀನ್ ಸಿಟಿ ಆಗುವುದು ಯಾವಾಗ ?

## ದುರ್ವಾಸನೆಗೆ ಜನ ಹೈರಾಣ, ಹಳೇ ಊರಿನಲ್ಲಿ ಸ್ವಚ್ಛತೆ ಮರೀಚಿಕೆ, ಬೀದಿ ನಾಯಿಗಳ ಹಾವಳಿ

ಬಿ. ಸಿಕಂದರ್



ದಾವಣಗೆರೆ, ಜ.31- ಮಹಾನಗರ ಪಾಲಿಕೆ ಮಹಾಪೌರ ಕೆ. ಚಮನ್ ಸಾಬ್ ಅವರ ನಗರವನ್ನು ಕಸಮುಕ್ತ ನಗರವನ್ನಾಗಿಸಿ ಸ್ಮಾರ್ಟ್ ಸಿಟಿ ಮಾಡುವ ಪ್ರಯತ್ನ ಒಂದೆಡೆಯಾದರೆ, ಮತ್ತೊಂದೆಡೆ ನಗರದ ಪ್ರಮುಖ ರಸ್ತೆಯ ಬದಿಗಳಲ್ಲಿ ಕಸ ತುಂಬಿರುವ ರಾಶಿ-ರಾಶಿ ಚೀಲಗಳ ಗಂಟು, ಇದರ ನಡುವೆ ನಾಯಿಗಳ ಹಾವಳಿ ಮತ್ತು ದುರ್ವಾಸನೆಯಿಂದಾಗಿ ಪಾದಚಾರಿಗಳು ಮೂಗು ಮುಚ್ಚಿಕೊಂಡು, ಕಣ್ಣಿದ್ದು ಕುರುಡರಂತೆ ಸಾಗುವ ದೃಶ್ಯ ದಕ್ಷಿಣ ಕ್ಷೇತ್ರದ ಹಳೇ ಭಾಗಗಳಲ್ಲಿ ಸಾಮಾನ್ಯವಾಗಿವೆ.

ಹೌದು, ಬೇತೂರು ರಸ್ತೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದಲ್ಲಿ (ವಡ್ಡರ ಕೇರಿ) ಬಿದ್ದಿರುವ ಈ ಕಸದ ರಾಶಿ ಈ ಭಾಗದ ಜನರಿಗೆ ತಲೆಗೆ ನೋವುಂಟು ಮಾಡಿದ್ದಲ್ಲದೇ, ಗಾಳಿ ಬೀಸಿದಾಗ ಕಸ ಚೆಲ್ಲಾಪಿಲ್ಲಿಯಾಗಿ ರಸ್ತೆಗೆ ಹರಡುತ್ತದೆ.

ಶಾಲೆಯ ಗೋಡೆಗೆ ಮೂತ್ರವಿಸರ್ಜನೆ ಮಾಡುವ ನಾಗರಿಕರಿಕರ ವರ್ತನೆಯಿಂದಾಗಿ ಶಾಲೆಯ ಸಿಬ್ಬಂದಿಗೆ ಮುಜುಗರ ಉಂಟು ಮಾಡಿದ್ದು, ಆ ದಾರಿಯಲ್ಲಿ ಸಾಗುವ ಮಹಿಳೆಯರಿಗೆ, ಶಾಲೆಯ ಮಕ್ಕಳಿಗೆ ಹಾಗೂ ಪಾದಚಾರಿಗಳಿಗೆ ಕಿರಿ-ಕಿರಿಯಾಗಿ ಪರಿಣಮಿಸುತ್ತಿದೆ ಎಂದು ಸಮಸ್ಯೆಯ ಬಗ್ಗೆ ಸ್ಥಳೀಯ ಹಿರಿಯ ನಾಗರಿಕ ದಾದಾಪೀರ್ ವಿವರಿಸಿದರು.

ಉತ್ತಮ ಪರಿಸರ ಇದ್ದರೆ ಮಾತ್ರ ಸದೃಢ ಆರೋಗ್ಯ ಹೊಂದಬಹುದು ಎನ್ನುವ ಆಟೋ ಚಾಲಕ ಮುನ್ನಾ ಅವರು, ಅಭಿವೃದ್ಧಿ ಕಾರ್ಯಗಳು ಈ ಭಾಗದ ಕೆಲವು ಪ್ರದೇಶಗಳಲ್ಲಿ ಮರಿಚೀಕೆಯಾಗಿವೆ ಎಂದ ಅವರು, 'ಸ್ಮಾರ್ಟ್ ಸಿಟಿ ಓಕೆ, ಆದ್ರೆ ಕ್ಲೀನ್ ಸಿಟಿ' ಆಗುವುದು ಯಾವಾಗ ಎಂದು ಪ್ರಶ್ನಿಸಿದರು.

ನರಸರಾಜ ಪೇಟೆ ನೀರಿನ ಟ್ಯಾಂಕ್ ಆವರಣದಲ್ಲಿ ಉದ್ಯಾನವನ ಹಾಳು ಬಿದ್ದು ಸುಮಾರು ವರ್ಷಗಳೇ ಗತಿಸಿವೆ. ಬೆಳಿಗ್ಗೆ ವಾಯು ವಿಹಾರಕ್ಕೆ ಬರುವ ಮಹಿಳೆಯರಿಗೆ ಕೂರಲು ಸೂಕ್ತ ವ್ಯವಸ್ಥೆ ಇಲ್ಲ, ಮಕ್ಕಳಿಗೆ ಆಟದ ಮೈದಾನವಿಲ್ಲ.

ಇಲ್ಲಿ ವಯೋವೃದ್ಧರು ವಿಶ್ರಾಂತಿ ಪಡೆಯಲು ಆಸನದ ವ್ಯವಸ್ಥೆ ಇಲ್ಲ. ಮೇಯರ್ ಅವರ ವ್ಯಾಪ್ತಿಗೆ ಬರುವ ಈ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

# ವಾರಕ್ಕೆ ಅರವತ್ತು ಗಂಟೆಗಳ ಶ್ರಮದಿಂದ ಆರೋಗ್ಯದ ಮೇಲೆ ಪರಿಣಾಮ : ಆರ್ಥಿಕ ಸಮೀಕ್ಷೆ

ನವದೆಹಲಿ, ಜ. 31 - ವಾರಕ್ಕೆ 60 ಗಂಟೆಗಳ ಕಾಲ ಶ್ರಮಿಸುವುದರಿಂದ ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ ಎಂದು ಹಲವಾರು ಅಧ್ಯಯನಗಳು ತಿಳಿಸಿವೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ಹೇಳಲಾಗಿದೆ.

ದೀರ್ಘಕಾಲ ಕೆಲಸದ ಸ್ಥಳದಲ್ಲಿ ಇರುವುದರಿಂದ ವ್ಯಕ್ತಿಗಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ. ದಿನಕ್ಕೆ 12 ಗಂಟೆ ಕಾಲ ಕೆಲಸ ಮಾಡುವವರು ಒತ್ತಡಕ್ಕೆ ಸಿಲುಕುತ್ತಾರೆ ಎಂದು ಸಮೀಕ್ಷೆ ಹೇಳಿದೆ

ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ಇನ್ಫೋಸಿಸ್ ಸ್ಥಾಪಕ ನಾರಾಯಣ ಮೂರ್ತಿ ಈ ಹಿಂದೆ ಹೇಳಿಕೆ ನೀಡಿದ್ದರು. ಇಂತಹ ಸಲಹೆಗಳ ಬಗ್ಗೆ ತೀವ್ರ ಆಕ್ಷೇಪಗಳು ವ್ಯಕ್ತವಾಗಿದ್ದವು.

# ರಾಣೇಬೆನ್ನೂರು ಸಿದ್ಧಾರೂಢಮಠದಲ್ಲಿ ಇಂದಿನಿಂದ ವೇದಾಂತ ಪರಿಷತ್

ಸಿದ್ಧಾರೂಢ ಮಠದಲ್ಲಿ ಶ್ರೀ ಮಲ್ಲಯ್ಯಜ್ಜನವರ ನೇತೃತ್ವದಲ್ಲಿ ಇಂದಿನಿಂದ ಮೂರು ದಿನಗಳ ಕಾಲ 25ನೇ ವರ್ಷದ ವೇದಾಂತ ಪರಿಷತ್ ಹಾಗೂ ಕೊನೆಯ ದಿನ ಶ್ರೀ ಸಿದ್ಧಾರೂಢರ 11 ನೇ ವರ್ಷದ ಮಹಾರಥೋತ್ಸವ ನಡೆಯಲಿದೆ. ಮಹಾಸಭೆಯಲ್ಲಿ ಹುಬ್ಬಳ್ಳಿ ಸಿದ್ಧಾರೂಢ ಮಠದ ಸಚ್ಚಿದಾನಂದ ಶ್ರೀಗಳು, ತೆಲಗಿ ಪೂರ್ಣಾನಂದ ಶ್ರೀಗಳು, ಸೌಟಗಿ ಲಿಂಗಯ್ಯ ಸ್ವಾಮಿಗಳು, ಜಡೇ ಸಿದ್ದೇಶ್ವರ ಮಠದ ರಮಾನಂದ ಶ್ರೀಗಳು, ಗುತ್ತೂರು ಪ್ರಭುಲಿಂಗ ಶ್ರೀಗಳು ಭಾಗವಹಿಸುವರು.

ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು





ನಮ್ಮೆಲ್ಲರ ಪ್ರೀತಿಯ
ವಿನಾಯಕ ರೈಸ್ ಮಿಲ್ ಮಾಲೀಕರಾದ
ಶ್ರೀ ವಿ. ಸಿದ್ದೇಶ್
ಅವರಿಗೆ ಹೃದಯಪೂರ್ವಕ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

- ನಾಗೇಂದ್ರಪ್ಪನವರು ಹಿರೇಕೊಗಲೂರು
- ವಿನಯ್ ಕುಮಾರ್ ಜಿ.ಆರ್
- ಗೋಪಿಕೃಷ್ಣ
- ಮಹಾಂತೇಶ್
- ಮಂಜು ಮಾಗಿ
- ಹಾಲೇಶ್ ಹಳ್ಳಿಕೇರಿ
- ಶರತ್‌ಕುಮಾರ್
- ವಿನಯ್ ಕರಮುಡಿ
- ದಾದಾಪೀರ್, ಹರಿಹರ
- ಬಸಯ್ಯ
- ಅಜ್ಜಯ್ಯ
- ನಾಗರಾಜ
- ಅಲಿ
- ಗಣೇಶ್
- ಜಿ. ಓಂಕಾರಪ್ಪ
- ಷಣ್ಮುಖ
- ಹೊನ್ನರಾಜು
- ರಾಜು ಗುಡಿಗೇರಿ
- ಮಹಾಂತೇಶ್
- ರಂಜಾನ್
- ಯಶವಂತ್
- ಬಸವ

ವಿನಾಯಕ ರೈಸ್ ಮಿಲ್ ಸಿಬ್ಬಂದಿವರ್ಗ, ದಾವಣಗೆರೆ

ಹುಟ್ಟುಹಬ್ಬದ ಶುಭಾಶಯಗಳು



ನಮ್ಮ ಆತ್ಮೀಯರೂ,
ವಿನೋಬನಗರದ ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ ಅಧ್ಯಕ್ಷರೂ,
ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾ ಉಪಾಧ್ಯಕ್ಷರೂ ಆದ
ಶ್ರೀ ಶ್ರೀನಿವಾಸ್ ದಾಸಕರಿಯಪ್ಪ
ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.


- ಹೆಚ್. ದಿವಾಕರ್, ವಕೀಲರು, ಜಿಲ್ಲಾ ಸಂಚಾಲಕರು, ಕಾನೂನು ಪ್ರಕೋಷ್ಠ, ಸಂಸ್ಥಾಪಕ ಅಧ್ಯಕ್ಷರು, ದಾವಣಗೆರೆ ವಕೀಲರ ಸಹಕಾರ ಸಂಘ ನಿ., ಮಾಜಿ ಉಪಾಧ್ಯಕ್ಷರು, ವಕೀಲರ ಸಂಘ, ದಾವಣಗೆರೆ.
- ಎ.ಸಿ. ರಾಘುವೇಂದ್ರ, ವಕೀಲರು, ರಾಜ್ಯ ಸಮಿತಿ ಸದಸ್ಯರು ಬಿಜೆಪಿ ಕಾನೂನು ಪ್ರಕೋಷ್ಠ ನಿರ್ದೇಶಕರು, ವಕೀಲರ ಸಹಕಾರ ಸಂಘ ನಿ.,
- ಅಜೀರ್ ಪಠಾಣ್ (ರಿಯಲ್ ಎಸ್ಟೇಟ್), ಎಸ್.ಎಸ್.ಎಸ್. ಎಂಟರ್‌ಪ್ರೈಸಸ್
- ಎ.ಎಸ್. ಮಂಜುನಾಥ, ಸಹ ಕಾರ್ಯದರ್ಶಿ, ವಕೀಲರ ಸಂಘ, ದಾವಣಗೆರೆ.
- ಕಿರಣ್ ಕುಮಾರ್ ಸುರ್ವೆ, ಬಿಜೆಪಿ ಮುಖಂಡರು ಮತ್ತು ಉದ್ಯಮಿಗಳು
- ಡಿ.ಎಂ. ಕಾಂತರಾಜ್, ಬಿಜೆಪಿ ಮುಖಂಡರು, ಮಾಜಿ ಪಾಲಿಕೆ ಸದಸ್ಯರು
- ಎಸ್.ಎನ್. ವಿಜಯಕುಮಾರ್ • ಎಸ್. ಮಂಜುನಾಥ್, • ಯಲ್ಲೋಜಿರಾವ್ ಪವಾರ್
- 16ನೇ ವಾರ್ಡ್‌ನ ಎಲ್ಲಾ ಬೂತ್ ಅಧ್ಯಕ್ಷರು, ಮುಖಂಡರುಗಳು, ಹಾಗೂ ಕಾರ್ಯಕರ್ತರು



ಜನ್ಮ ದಿನದ ಶುಭಾಶಯಗಳು




ರಾಜ್ಯ ಬಿ.ಜೆ.ಪಿ. ಎಸ್.ಟಿ. ಮೋರ್ಚಾ ಉಪಾಧ್ಯಕ್ಷರೂ,
ಬಿ.ಜೆ.ಪಿ. ಜಿಲ್ಲಾ ಉಪಾಧ್ಯಕ್ಷರೂ ಆದ
ನನ್ನ ನೆಚ್ಚಿನ ಬಾಲ್ಯ ಸ್ನೇಹಿತ,
ಶ್ರೀ ಶ್ರೀನಿವಾಸ್ ದಾಸಕರಿಯಪ್ಪ
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು. ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯ ನೀಡಿ, ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡುವ ಚೈತನ್ಯ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.




ಪ್ರವೀಣ್ ಡಿ.ಎಂ. A N P Convent
- ತುಂಗಭದ್ರಾ, ಶುದ್ಧ ನೀರಿನ ಘಟಕ, ದಾವಣಗೆರೆ.
- A N P & Lourds 97ನೇ ಬ್ಯಾಚ್ ಗ್ರೂಪ್ ಆಫ್ ಫ್ರೆಂಡ್ಸ್
- A N P Convent. ಸಿಬ್ಬಂದಿ ವರ್ಗ
- ಶಾರದಾ ಬುಕ್ ಸ್ಟಾಲ್ • ಸ್ನೇಹ ಡೆಂಟಲ್ ಕ್ಲಿನಿಕ್.

ಎಂ ಸಿ ಸಿ 'ಎ' ಬ್ಲಾಕ್ ದಾವಣಗೆರೆ.













KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas